# ಅಪರಂಜಿ

ತಿಳಿನಗೆಯ ಕಾರಂಜಿ

ಫೆಬ್ರವರಿ 2019

## ಸೋಷಿಯಲ್ ಮೀಡಿಯ ಸ್ಪೆಷಲ್




ಇಂಟರ್‌ನೆಟ್‌ನಲ್ಲಿದ್ದಾಗ ನಾವು ನಾಯಿ ಎಂಬುದು
ಯಾರಿಗೂ ಗೊತ್ತಾಗುವುದಿಲ್ಲ.

ಬಿಡಿ ಪ್ರತಿ: ರೂ.10.00



# ಅಪರಂಜಿ

ತಿಳಿನಗೆಯ ಕಾರಂಜಿ


ಸಂಪುಟ 36
ಸಂಚಿಕೆ – 05
ಫೆಬ್ರವರಿ – 2019



**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್



**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ


## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ.. | ಎಂ. ಶಿವಕುಮಾರ್ | 3 |
| ದಡ್ಡಮ್ಮನ ಕುಟ್ಟು ಬಾಕತನ | ಭುವನೇಶ್ವರಿ ಹೆಗಡೆ | 5 |
| ಸೋಸಿಯಲ್ ಮೀಡಿಯಾ ಅಂದ್ರೇನ್ರಿ | ಸಿ. ಆರ್. ಸತ್ಯ | 9 |
| ಅಜ್ಜಿ ಪಟಲಾಂನ ಐ.ಟಿ. ಡ್ರೈವ್ | ಇ. ಆರ್. ರಾಮಚಂದ್ರನ್ | 11 |
| ಡೇಟ್ ಬಾರ್ ಆದ.... | ಅನಿತಾ ನರೇಶ್ ಮಂಚಿ | 14 |
| ಹೀಗೊಂದು ಅತಿಥಿ ಸತ್ಕಾರ... | ಗಣೇಶ್ ಹೆಗ್ಗಡೆ | 16 |
| ಲೈಕೋ ರಕ್ಷತಿ ಲೈಕಿತಃ | ಎನ್. ರಾಮನಾಥ್ | 18 |
| ಸೋಷಿಯಲ್ ಮೀಡಿಯಾ ರಸಕ್ಷಣಗಳು | ಬೇಲೂರು ರಾಮಮೂರ್ತಿ | 22 |
| ಆಹಾ, ಬದುಕು ಎಷ್ಟು ವರ್ಣ ರಂಜಿತ | ಸಹನಾ ಪ್ರಸಾದ್ | 26 |
| ತುಂತುರು | ದಂನಆ | 29 |
| ಟೆಕ್ಸ್ಟ್ ಬೆಳ್ಳಿ, ಎಮೋಜಿ ಬಂಗಾರ | ನಳಿನಿ ಸೂರ್ಯ ಪ್ರಕಾಶ್ | 30 |
| ಫೇಸ್‌ಬುಕ್ ವೈರಿಗಳು | ಪ್ರಕಾಶ್ ಶೆಟ್ಟಿ | 32 |
| ಮೊಬೈಲ್ ರಾಮಾಯಣ | ತೇಜಸ್ವಿನಿ ಹೆಗಡೆ | 34 |
| ಸೋ.ಮಿ. ಮೇನಿಯಾ | ನಂನಾಗ್ರಾಜ್ | 35 |
| ಟ್ವಿಟರಿಗನಾಗಿ ಸೇರಿದ್ಮೇಲೆ.... | ಎನ್ನಾರ್ | 39 |


**ಮುಖಪುಟ ವ್ಯಂಗ್ಯಚಿತ್ರ: ಸೌಜನ್ಯ : ನ್ಯೂಯಾರ್ಕರ್**


ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com ದೂರವಾಣಿ: 080-23345259

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080–26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● **ಪ್ರಕಾಶ್**



ತಜ್ಞ ವೈದ್ಯರ ಕ್ಲಿನಿಕ್ ನಲ್ಲಿ ಕಂಡ ಫಲಕ:

**'ಗೂಗಲ್‌ನಲ್ಲಿ ಓದಿ ಬಂದಿರುವ ರೋಗಿಗಳಿಗೆ ಪ್ರವೇಶವಿಲ್ಲ!'**

★★★★★

"ಮೀಡಿಯಾ ಹೈಪ್" ಅನ್ನೋದನ್ನ ಪ್ರಚಲಿತ ಮಾಡಿದವನು ಯಾರೂ? ಅಂತ ಮೀಡಿಯಾ ತಜ್ಞರು ಹುಡುಕುತ್ತಿದ್ದಾರಂತೆ.

★★★★★

ವಿವಿಧ ಮಾಧ್ಯಮಗಳಿಂದ ಉದ್ಭವಿಸುತ್ತಿರುವ ಅಗಾಧವಾದ ಸಾಮಾಜಿಕ ತಲ್ಲಣಗಳನ್ನು ತಡೆಗಟ್ಟಲು ಅತ್ಯುನ್ನತ ಮಟ್ಟದ ಸಮಿತಿಯನ್ನು ನೇಮಿಸುವುದು ಅತ್ಯಗತ್ಯ.

**ಶಶಿ ತರೂರರ ಇಂಗ್ಲೀಷ್ ಸಂದೇಶದ ಸರಳೀಕೃತ ಭಾಷಾಂತರ!!**

★★★★★

ಜೀವನವನ್ನೇ "ಹೈಪ್" ದೃಷ್ಟಿಯಿಂದ ನೋಡದೆ ಹಾಸ್ಯದ ಕಿಡಿಗಳನ್ನು ಹೇಗೆ ಹಾರಿಸುವುದು ಎಂದು ಅಪರಂಜಿ ಪಲುಕಿದಳಂತೆ!

★★★★★

**ಅಪರಂಜಿ ಕಾರ್ಯಾಲಯಕ್ಕೆ ಕೃತಕ ಇಂಟೆಲಿಜೆನ್ಸ್ ಅಳವಡಿಸುವುದನ್ನು ಖಂಡಿಸಬೇಕು!**

★★★★★

*ಈ ಕೆಳಗಿನ 'ಕ್ಯೂ ಆರ್ ಕೋಡ್‌ಕಿಡಿ' ಓದಲು –*
*ನಿಮ್ಮ ಮೊಬೈಲ್‌ನಿಂದ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.*
*ಶುಭವಾಗಲಿ!*

# "ನಮ್ಮ ನಿಮ್ಮಲ್ಲಿ"


ನನ್ನ ಚಿಕ್ಕಂದಿನಲ್ಲಿ ನಮ್ಮ ಮನೆಗೆ ವಾರಕ್ಕೊಮ್ಮೆ ರಂಗಜ್ಜಿ ಬಂದು ನಮ್ಮಮ್ಮನಿಗೆ ಬೇಕಾದ ಸಾರಿನಪುಡಿ, ಮೆಣಸಿನ ಪುಡಿ ಇತ್ಯಾದಿಗಳನ್ನು ಕೊಟ್ಟು ಹೋಗುತ್ತಿದ್ದರು. ಹೋಗುತ್ತಿದ್ದರು ಎಂದ ಮಾತ್ರಕ್ಕೆ ಕೊಟ್ಟ ತಕ್ಷಣ ಅಲ್ಲ. ನಮ್ಮಮ್ಮನೊಂದಿಗೆ ಸಾವಕಾಶವಾಗಿ ಹರಟೆಹೊಡೆದು, ಬಡಾವಣೆಯ ಹೆಂಗಳೆಯರ ಜನ್ಮ ಜಾಲಾಡಿ, ಒಂದು ಲೋಟ ಕಾಫಿ ಆದನಂತರವೇ ಅವರ ವಿದಾಯ. ಒಟ್ಟಿನಲ್ಲಿ ಆ ದಿನಗಳಲ್ಲಿ ಅವರೇ ನಮ್ಮ ಸೋಷಿಯಲ್ ಮೀಡಿಯಾ. ಅನಂತರ ನನಗೆ ಪ್ರಿಂಟ್ ಮೀಡಿಯಾದ ಜಗತ್ತು ತೆರೆದುಕೊಂಡಿತು. ತಾಯಿನಾಡುವಿನ ರಾಜಕೀಯ ವರದಿಗಳು, ಪ್ರಜಾವಾಣಿಯ ಛೂಬಾಣ ಇವುಗಳು ಒಂದು ಹೊಸ ಜಗತ್ತನ್ನು ನನ್ನ ಅರಿವಿಗೆ ತಂದವು. ಐವತ್ತರ ದಶಕದಲ್ಲಿ ವಾರಕ್ಕೊಮ್ಮೆ ರೇಡಿಯೋ ಸಿಲೋನಿನಿಂದ ಬಿತ್ತರವಾಗುತ್ತಿದ್ದ ಬಿನಾಕಾ ಗೀತ್‌ಮಾಲಾ ನಮ್ಮೆಲ್ಲರನ್ನು ತನ್ನತ್ತ ಸೆಳೆಯುತ್ತಿತ್ತು. ಎಂಭತ್ತರ ದಶಕದ ಹೊತ್ತಿಗೆ ಕಪ್ಪು ಬಿಳುಪು ಟಿ.ವಿ., ಬೆಂಗಳೂರಿಗೆ ಬಂದು, ಸಾಮಾಜಿಕ ಧಾರಾವಾಹಿ ಹಮ್‌ಲೋಗ್ ತೆರೆಯ ಮೇಲೆ ಕಾಣಲು ಪ್ರಾರಂಭವಾದದ್ದು ಒಂದು ಹೊಚ್ಚಹೊಸ ದೃಶ್ಯಾನುಭವ... ಜೀವಯಾತ್ರೆಯಲ್ಲಿ ಇವನ್ನೆಲ್ಲಾ ಅನುಭವಿಸಿ ತೊಂಭತ್ತರ ದಶಕದ ಕೊನೆಗೆ ರಿಟೈರಾಗುವ ಹೊತ್ತಿಗೆ ಈ ಮೇಯ್ಲ್ ಜಗತ್ತಿಗೆ ಪದಾರ್ಪಣ ಮಾಡಬೇಕಾಯಿತು. ೨೦೦೪ ರಲ್ಲಿ ಮಗಳನ್ನು ನೋಡಲು ಇಂಗ್ಲೆಂಡಿಗೆ ಹೋಗಿದ್ದಾಗ ಅವಳು ತನ್ನ ಗೆಳತಿಯರೊಡನೆ ಫೇಸ್‌ಬುಕ್‌ನಲ್ಲಿ ಹರಟುತ್ತಿದ್ದುದನ್ನು ನೋಡಿ ಇನ್ನೊಂದು ಕಾಲಹರಣದ ವಿಧಾನ ಹುಟ್ಟಿಕೊಂಡಿತಲ್ಲಪ್ಪಾ ಎನ್ನಿಸಿದ್ದು ಸುಳ್ಳಲ್ಲ. ಆಗ ಶುರುವಾದ ಈ ಸಾಮಾಜಿಕ ಜಾಲತಾಣಗಳ ಧಾಳಿ, ವಾಟ್ಸಪ್, ಇನ್ಸ್ಟಗ್ರಾಮ್, ಟ್ವಿಟರ್, ಸ್ಮಾರ್ಟ್‌ಫೋನ್‌ನಲ್ಲಿನ ಸಹಸ್ರಾರು ಆ್ಯಪ್‌ಗಳು ಇವುಗಳ ರೂಪದಲ್ಲಿ ಸಾಮಾಜಿಕ ಸಂವಹನ ಮೂಲ ರೂಪವನ್ನೇ ಬುಡಮೇಲು ಮಾಡುವುದರಲ್ಲಿ ಯಶಸ್ವಿಯಾದವು. ಸಂಜೆ ಯಾರೊಂದಿಗಾದರೂ ಮಾತನಾಡಬೇಕು ಅನ್ನಿಸಿದರೆ, ಪಾದರಕ್ಷೆ ಧರಿಸಿ, ಗೆಳೆಯನ ಮನೆಗೆ ಹೋಗಿ ಕಾಫಿ ಕುಡಿದು ಹರಟುವ ಜಗತ್ತು ನೋಡುತ್ತ ನೋಡುತ್ತಲೇ ನನ್ನ ಕಣ್ಣ ಮುಂದೆಯೇ ಕರಗಲು ಶುರುವಾಯಿತು.

ಮೊನ್ನೆ ಯೂಟ್ಯೂಬಿನಲ್ಲಿ, "ಸೋಷಿಯಲ್ ಮೀಡಿಯಾ ಪ್ರಜಾಪ್ರಭುತ್ವಕ್ಕೆ ಮಾರಕವೇ" ಎಂಬ ವಿಷಯದ ಬಗ್ಗೆ ಗಹನವಾದ ಚರ್ಚೆಯೊಂದನ್ನು ನೋಡಿದೆ. ಅಮೆರಿಕಾದಲ್ಲಿ ಟ್ರಂಪ್‌ನ ಗೆಲವು ಬ್ರಿಟನ್ನಿನಲ್ಲಿ ಬ್ರೆಕ್ಸಿಟ್ ಅನುಮೋದನೆ ಇವೆರಡೂ ಕೇಂಬ್ರಿಡ್ಜ್ ಅನಲಿಟಿಕಾ ದವರು ಫೇಸ್‌ಬುಕ್ ಮಾಹಿತಿಯನ್ನು ದುರುಪಯೋಗ ಪಡಿಸಿದ್ದರ ಫಲಶ್ರುತಿ ಎಂಬ ವಾದವನ್ನು ಒಂದು ಗುಂಪು ಯಶಸ್ವಿಯಾಗಿ ಮಂಡಿಸಿತು. ಈ ರೀತಿಯಲ್ಲಿ ಜನಾಭಿಪ್ರಾಯವನ್ನು ಒಂದು ಸಂಸ್ಥೆ ತನ್ನ ಅನುಕೂಲಕ್ಕೆ ತಕ್ಕಂತೆ ರೂಪುಗೊಳಿಸುವುದು ಸಾಧ್ಯವಾದರೆ, ಪ್ರಜಾಪ್ರಭುತ್ವ ಎಂಬ ಪದಕ್ಕೆ ಅರ್ಥವೇ ಇಲ್ಲದಂತಾವುದರಲ್ಲಿ ಸಂಶಯವಿಲ್ಲ ಎಂಬ ಅಭಿಪ್ರಾಯ ಈ ಗುಂಪಿನವರದ್ದು.

ಸತ್ಯ ಸಂಗತಿ ಏನಾದರೂ ಇರಲಿ, ಬದಲಾಗುವುದು ಕಾಲನಿಯಮ ಎಂಬ ಸತ್ಯವನ್ನು ಅರಿತು, ಅಪರಂಜಿ ಈ ಸಂಚಿಕೆಯಲ್ಲಿ ಈ ಸಾಮಾಜಿಕ ಜಾಲತಾಣಗಳ ವಿವಿಧ ರೂಪಗಳನ್ನು ತನ್ನ ವಿಡಂಬನ ದೃಷ್ಟಿಯಿಂದ ದಾಖಲಿಸಿದ್ದಾಳೆ. ಭುವನೇಶ್ವರಿ ಹೆಗಡೆಯವರ ಕೀಲಿಮಣೆ ಕುಟ್ಟುವಿಕೆ ಹಾಗೂ ನುರಿತ ಹಾಸ್ಯಲೇಖಕ ರಾಮನಾಥ್ ಅವರ ಫೇಸ್‌ಬುಕ್ ವಿಡಂಬನೆ ಒಂದು ಪ್ರೌಢ ಬರಹ. ಅಂತೆಯೇ, ಅನಿತಾ ನರೇಶ್ ಮಂಚಿ, ಸಹನಾ ಪ್ರಸಾದ್, ಸಿ.ಆರ್. ಸತ್ಯ, ಆನಂದ, ಇ. ಆರ್. ರಾಮಚಂದ್ರನ್, ಪ್ರಕಾಶ್ ಶೆಟ್ಟಿ, ತೇಜಸ್ವಿನಿ ಹೆಗ್ಗಡೆ, ನಂನಾಗ್ರಾಜ್, ಗಣೇಶ ಹೆಗ್ಗಡೆ, ನಳಿನಿ, ಬೇಲೂರು ಇನ್ನಿತರರ ಲೇಖನಗಳು ಸಾಮಾಜಿಕ ಜಾಲತಾಣದ ವಿವಿಧ ಮುಖಗಳ ಬಳಕೆಯಲ್ಲಿ ಹಾಸ್ಯದ ಸೆಲೆಯನ್ನು ಹುಡುಕುವುದರಲ್ಲಿ ಯಶಸ್ವಿಯಾಗಿವೆ. ಈ ಬಾರಿಯ ಅಪರಂಜಿ ಕಿಡಿಯಲ್ಲಿ ಪ್ರಕಾಶ್ ಅವರು ಒಂದು ಕಿಡಿಯನ್ನು QR ಕೋಡ್‌ನಲ್ಲಿ ಕೊಟ್ಟು ಓದುಗರಿಗೆ ಒಂದು ಸವಾಲನ್ನು ನೀಡಿದ್ದಾರೆ. ನಿಮ್ಮ ಮೊಬೈಲ್‌ನಲ್ಲಿ ಅವರ ಗುಪ್ತ ಕಿಡಿಯನ್ನು ಓದಿ ಆನಂದಿಸಿ.

**ಎಂ. ಶಿವಕುಮಾರ್**

## ಅಭಿನಂದನೆಗಳು




ನಮ್ಮ ಉಪಸಂಪಾದಕರಾದ **ಬೇಲೂರು ರಾಮಮೂರ್ತಿ** ಅವರು ಬರೆದಿರುವ **'ಕವಿ ಕಾವ್ಯ ಸ್ವಾರಸ್ಯ'** ಕೃತಿಗೆ ವಿಶ್ವೇಶ್ವರಯ್ಯ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿ ಲಭಿಸಿದೆ.

ಕುಮಾರ ವ್ಯಾಸ, ಹರಿಹರ, ರನ್ನ ಲಕ್ಷ್ಮೀಶ, ರುದ್ರಭಟ್ಟ, ಮುದ್ದಣ, ರತ್ನಾಕರ ವರ್ಣಿ ಮುಂತಾದ ಕವಿಗಳ ಕಾವ್ಯಗಳಲ್ಲಿ ಅಡಗಿರುವ ಹಾಸ್ಯ ಸ್ವಾರಸ್ಯಗಳನ್ನು ಆಯ್ದು ರಚಿಸಿರುವ ಈ ಲೇಖನ ಮಾಲೆಗೆ ನಾನು ಮುನ್ನುಡಿ ಬರೆದಿರುವುದು ಇನ್ನೊಂದು ವಿಶೇಷ. ಬೇಲೂರರಿಗೆ ಅಪರಂಜಿ ಓದುಗರ ಪರವಾಗಿ ಅಭಿನಂದನೆಗಳು.

**– ಎಂ. ಶಿವಕುಮಾರ್**

# ದಡ್ಡಮ್ಮನ ಕುಟ್ಟುಬಾಕತನ

**• ಭುವನೇಶ್ವರಿ ಹೆಗಡೆ**

ನಾಲ್ಕೈದು ವರ್ಷಗಳ ಹಿಂದೆ ಇದ್ದಕ್ಕಿದ್ದಂತೆ ನನ್ನ ಕೈಗೆ ಎಲ್ಲವೂ ಅಸ್ಪರ್ಶವೆನ್ನಿಸತೊಡಗಿತು.. ಇರುವೆಗಳು ಗೂಡುಕಟ್ಟಿ ಹರಿಯತೊಡಗಿದಂತೆ ಭಾಸವಾಗತೊಡಗಿತು. ಕಂಡಕ್ಟರ್ ನೀಡಿದ ಚಿಲ್ಲರೆಯನ್ನು ವ್ಯಾನಿಟಿ ಬ್ಯಾಗಿಗೆ ಹಾಕಿದೆನೆನ್ನಿಸಿದರೂ ಅದು ಕಾಲ ಕೆಳಗೆ ಬೀಳತೊಡಗಿತ್ತು. ಕುಂಕುಮ, ಬಿಂದಿಗಳನ್ನು ಸರಿಯಾದ ಜಾಗದಲ್ಲಿ ಹಚ್ಚಿ ಕೂಡಿಸಲಾಗದೇ, ಪರರಿಂದ ನಾವು ಹಾಕಿಸಿಕೊಳ್ಳತೊಡಗಿದೆ. ಸೀರೆಗೆ ಪಿನ್ನು ಚುಚ್ಚಲಾಗದೇ ಚುಚ್ಚು ಮಾತುಗಳಿಗೆ ಆಹಾರವಾದೆ. ಬೋರ್ಡಿನ ಮೇಲೆ ವಿದ್ಯಾರ್ಥಿಗಳ ಕೈಯ್ಯಲ್ಲಿ ಬರೆಸಿ, ನಾನು ಬಾಯಲ್ಲಿ ವಿವರಿಸತೊಡಗಿದೆ. ಒಟ್ಟಾರೆ ಕೈಲಾಗದವಳಾದೆ. ಆದರೆ ನನ್ನ ದಿನಚರಿಯ ಭಾಗವೇ ಆಗಿದ್ದ ಓದಿ ಬರೆದು ಮಾಡುವ ಇಷ್ಟದ ಕೆಲಸ ನಿಂತುಹೋಗಿ ಉಂಡ ಅನ್ನ ಕರಗದ ಸ್ಥಿತಿ ಏರ್ಪಟ್ಟಿತು. ಡಾಕ್ಟರಲ್ಲಿಗೆ ಓಡಿದೆ. ಟಣ್ ಟಣ್ ಎಂದು ಪರೀಕ್ಷಿಸಿ ನರದೊತ್ತಡದ ಪ್ರಮಾಣ ಕಂಡು ಹಿಡಿದು ಅಂಗೈಗೆ ರಕ್ತ ಸರಬರಾಜು ಆಗ್ತಿಲ್ಲ. ಮುಂಗೈ ಟನಲ್ ಚಪ್ಪಟೆಯಾಗಿದೆ (ಕಾರ್ಪೆಲ್ ಟನಲ್ ಸಿಂಡ್ರೋಮ್ ಎಂಬ ಚೆಂದದ ಹೆಸರು ಅದಕ್ಕೆ). ಅಂಗೈ ಕೆಳಭಾಗ ಕೊರೆದು ಕಂಪ್ರೆಸ್ ಆದ ನರವನ್ನು ಬಿಡಿಸಿಕೊಟ್ಟು ಚಿಕ್ಕ ಆಪರೇಷನ್ ಮಾಡಿ ಎರಡೇ ದಿನಕ್ಕೆ ಮನೆಗೆ ಕಳಿಸುತ್ತೇವೆ ಎಂದರು.

ಕೈ ಆಪರೇಷನ್ ಆಗಿ ಮನೆಗೆ ಬಂದ ಬಳಿಕವೂ ಕೈಲಾಗದ ಸ್ಥಿತಿ ಮುಂದುವರಿದೇ ಇತ್ತು. ಯೋಗಕ್ಷೇಮ ವಿಚಾರಿಸಲು ಬಂದ ಹಿತಚಿಂತಕರೆಲ್ಲರದ್ದೂ ಒಂದೇ ಸಲಹೆ. ನೀವು ಕಂಪ್ಯೂಟರಿನಲ್ಲಿ ಬರೆಯತೊಡಗಿರಿ. ಎಡಗೈಯಲ್ಲಿ ಸಹ ಕುಟ್ಟಬಹುದು. ಪರಿಣಾಮ, ಹಾಲ್‌ನಲ್ಲಿದ್ದ ಕಂಪ್ಯೂಟರ್ ನಾನು ಮಲಗಿದ್ದಲ್ಲಿಗೇ ಟ್ರಾನ್ಸ್‌ಫರ್ ಆಯ್ತು. ರಜೆ ಬೇರೆ ಹಾಕಿದ್ದರಿಂದ ಟೈಂಪಾಸ್ ಮಾಡಲು ಕಂಪ್ಯೂಟರ್‌ನಲ್ಲೇ ಅಕೌಂಟ್ ಓಪನ್ ಮಾಡಿ, ಚೂರು ಪಾರು ಇ–ಮೇಲ್ ಮಾಡತೊಡಗಿದೆ. ತಮ್ಮ ಸಮಸ್ಯೆಗಳನ್ನಿಟ್ಟುಕೊಂಡು ಬರುವ ವಿದ್ಯಾರ್ಥಿಗಳು ಫೇಸ್ ಬುಕ್ ಎಂಬ ಮಾಯಾ ಜಿಂಕೆಯ ದರ್ಶನ ಮಾಡಿಸಿ ತಮ್ಮನ್ನೂ ಫ್ರೆಂಡ್ಸ್ ಮಾಡಿಸಿ ತಮ್ಮದೇ ರೀತಿಯ ನೆರವಿನ ಹಸ್ತ ಚಾಚಿದರು. ನನ್ನ ಕಂಪ್ಯೂಟರ್ ಅಜ್ಞಾನ ತಿಮಿರವನ್ನು ಓಡಿಸಲು ಶಿಷ್ಯಂದಿರೇ ಗುರುಗಳಾಗಿ ಮುಂದೆ ಬಂದರು.

ತಕ್ಕಮಟ್ಟಿಗೆ ಸುಂದರವಾಗೇ ಇದ್ದ ಕೈಬರಹದಲ್ಲಿ ಶುದ್ಧ ಕನ್ನಡವನ್ನು ಬರೆದುಕೊಂಡಿದ್ದ ನನಗೆ ಕಂಪ್ಯೂಟರ್ ಕನ್ನಡ ಉಬ್ಬಸ ಉಂಟು ಮಾಡತೊಡಗಿತು. ಒತ್ತಕ್ಷರ(ಅಕ್ಷರ ಎಂಬುದನ್ನೇ ಬರೆಯಲು ಬರುತ್ತಿರಲಿಲ್ಲ). ಬಂದರಂತೂ ತತ್ತರಿಸಿ ಆ ಪದವನ್ನೇ ಎತ್ತಂಗಡಿ ಮಾಡಬೇಕಾಗಿ ಬರುತ್ತಿತ್ತು. ನನ್ನ ಹೆಸರಿನಲ್ಲೇ ಇರುವ ಶಕಾರ ಶನಿಯಂತೆ ಕಾಡುತ್ತಿತ್ತು. ಶ್ವ ಬೇರೆ ವಕ್ಕರಿಸಿತ್ತು. ಒತ್ತಕ್ಷರಗಳನ್ನೂ ಮಹಾಪ್ರಾಣಗಳನ್ನೂ ವರ್ಜಿಸಿ ಅರ್ಕ ತರ್ಕಗಳನ್ನೆಲ್ಲಾ ಮೀರಿದ ಒಂದು ಸರಳಗನ್ನಡದ

ಕೀಲಿ ಮಣೆ ದೊರೆಯಬಾರದೇ ಎಂದು ಹಂಬಲಿಸುತ್ತಿದ್ದೆ. ನನ್ನ ಕೆಲವು ಕಿರಿಯ ಸ್ನೇಹಿತೆಯರು, ಆಂಟಿ, ನಿಮಗೆ ತೋಚಿದಂತೆ ಕುಟ್ಟಿ ಕೊಡಿ. ನಾವು ಸರಿ ಮಾಡಿ ಕೊಡುತ್ತೇವೆ. ಎಂದು ಅಭಯ ನೀಡಿದರಾದರೂ ನನ್ನ ಗಣಕ ಅಜ್ಞಾನ ಅಗಣಿತ ಕಾಲ ಮುಂದುವರಿಯುವ ಸೂಚನೆ ಕಂಡು, ಕಂಡಲ್ಲಿ ಅಡಗಿಬಿಟ್ಟರು. ಕೆಲವು ಬಾರಿ ಭಂಡ ಧೈರ್ಯದಲ್ಲಿ ಕನ್ನಡದಲ್ಲಿ ಟೈಪಿಸಿ ರವಾನಿಸಿ ಕೊನೆಯಲ್ಲಿ ಮತ್ತೊಂದು ಮೆಸೇಜಿನಲ್ಲಿ ದಯವಿಟ್ಟು ಎಲ್ಲಾ ಕಾರುಗಳನ್ನು ಕಾರ್ಯಗಳನ್ನಾಗಿಯೂ ಸಹಕಾರಗಳನ್ನು ಶಿವ ಕಾರುಗಳನ್ನಾಗಿಯೂ ಪರಿಗಣಿಸಿ ಓದಬೇಕಾಗಿ ವಿನಂತಿ ಎಂದೆಲ್ಲಾ ತಪ್ಪೋಲೆ ಕಳಿಸತೊಡಗಿದೆ. ಕನ್ನಡವನ್ನು ಇಂಗ್ಲೀಷಿನಲ್ಲಿ ಓದಿ ಸುಸ್ತಾದ ಸಂಪಾದಕ ಮಹಾಶಯರು, ನಿಮಗೆ ತಲೆ ಕೆಟ್ಟಿದ್ದೊಂದೇ ಅಲ್ಲ, ನಮ್ಮ ತಲೆಯೂ ಇಲ್ಲಿ ಕೆಟ್ಟು ಹೋಯಿತು. ನಿಮ್ಮ ಲೇಖನವನ್ನು ಕನ್ನಡದಲ್ಲಿ ಟೈಪ್ ಮಾಡಿಕೊಡಲು ಕೊಟ್ಟ ಹುಡುಗಿ ನೌಕರಿಯನ್ನೇ ತೊರೆದು ಊರಿಗೆ ಹೋಗಿದ್ದಾಳೆ ಎಂದೆಲ್ಲಾ ಮಂತ್ರ ಉದ್ಧರಿಸಿದ್ದರು. ಅರ್ಥಾತ್ ಉಗಿದಿದ್ದರು.

ಆಗಿನ್ನೂ ಓರ್ವ ಪಂಡಿತರು ಸರಳಗನ್ನಡದ ಹೊಸ ವರಸೆ ತೆಗೆದು ಕಟ್ಟಡವನ್ನು ಕಟಟಡ ಎಂದು ಬರೆಯಬಹುದು. ವಿಷಯ ವನ್ನು ವಿಸಯ ಎಂದು ಬರೆದರೆ ತಪ್ಪೇನು? ಎಂದೆಲ್ಲಾ ವಾದ ಹೂಡತೊಡಗಿ ನನ್ನಂಥ ಕನ್‌ಫೂಸಿಯಸ್ಸುಗಳಿಗೆ ಇನ್ನಿಲ್ಲದ ಕನ್‌ಫ್ಯೂಶನ್ ಮಾಡತೊಡಗಿದರು. ನಾನು ನನ್ನ ಹೆಸರನ್ನೇ ಒತ್ತಕ್ಷರ ತೆಗೆದು ತದ್ಭವಗೊಳಿಸಿ ಬನಸಿರಿ ಎಂದಿಟ್ಟುಕೊಂಡರೆ ಹೇಗೆ? ಎಂಬ ಕನಸಿಗೆ(ಸ್ವಪ್ನಕ್ಕಲ್ಲ) ಬಿದ್ದೆ. ಹಗಲು ರಾತ್ರಿ ಕನಸುಗಳಲ್ಲಿ ಒತ್ತಕ್ಷರ, ಮಹಾಪ್ರಾಣಗಳಿಲ್ಲದ ಕನ್ನಡ ಕುಣಿಯತೊಡಗಿತು.

ನನ್ನ ಇ'ದಡ್ಡತನವನ್ನು ಹಾಸ್ಯದ ವಸ್ತುವನ್ನಾಗಿಸಿ ನನ್ನ ಹಿಂದೆ ನಗುವ 4ಜಿ ಗಳು ನಮ್ಮ ಮನೆಯಲ್ಲೇ ಇದ್ದರು. ತಾಳ್ಮೆಯಿಂದ ಶಿಫ್ಟ್ ಒತ್ತಿ ಹಿಡಿದು ಟಿ ಯನ್ನು ಕುಟ್ಟಿದರೆ ಟ ಬರುತ್ತದೆ ದೊಡ್ಡಮ್ಮ. ಶಿಫ್ಟ್ ಒತ್ತಿಯೇ ಹಿಡಿದು ಎಸ್' ಹೊಡೆದರೆ ಶ' ಬರುತ್ತದೆ ಎಂದೆಲ್ಲವನ್ನೂ ಕಲಿಸಿದ್ದವು ಪಾಪ. ಆದರೂ ನಾನು ದಡ್ಡ ವಿದ್ಯಾರ್ಥಿಯ ಹಾಗೆ ವಿಸಯ ಎಂದೇ ಟೈಪ್ ಮಾಡಿದ್ದೆ. ತಾಳ್ಮೆಯ  ಕಟ್ಟೆ ಒಡೆದ ಮಗು, ಥೂ ಹೋಗಿ, ನೀವು ದೊಡ್ಡಮ್ಮ ಅಲ್ಲ ದಡ್ಡಮ್ಮ ಎಂದು ಹೇಳಿ ಓಡಿಬಿಟ್ಟಳು. (ಎರಡನೇ ಓಡಿದ ಪ್ರಕರಣ). ಅದನ್ನೇ ಕೂತು ಟೈಪ್ ಮಾಡೋಣವೆನ್ನಿಸಿತು. 'ತಾಳ್ಮೆಯ ಕಟ್ಟೆ ಒಡೆಯಿತು' ಎಂದು ಟೈಪ್ ಮಾಡಿದೆ. ನಾಚಿಕೆಯಿಲ್ಲದೆ ಮೂಡಿಬಂತು ವಾಕ್ಯ– 'ತಾಳ್ಮೆಯ ಕತ್ತೆ ಒದೆಯಿತು'. ನೋಡಿದೆ. ಮತ್ತೂ ನೋಡಿದೆ. ಹೌದಲ್ಲವೇ? ಕತ್ತೆಯ ತಾಳ್ಮೆ ಮೀರಿದಾಗ ತಾನೆ ಒದೆಯುವುದು? ಅಂದಮೇಲೆ ಇದು ತಪ್ಪು ನಿಜ ಆದರೆ ಸರಿಯಾದ ತಪ್ಪು!

ತಪ್ಪಾಗಿ ಕನ್ನಡ ಟೈಪ್ ಮಾಡಿದ ನನಗೆ ಮನಶ್ಶಾಂತಿಯೇ ಕದಡಿ ಹೋಗುತ್ತಿತ್ತು. ಕೂತಲ್ಲಿ ಸರಳಗನ್ನಡ, ಗಣಕ ಕನ್ನಡದ ಒತ್ತಕ್ಷರ ರಹಿತ ಸಂತಸಮಯ ಲಿಪಿಯೇ ಕಣ್ಮುಂದೆ ಬರತೊಡಗಿತ್ತು. ನನ್ನ ತಪ್ಪುಗಳು ಸುಧಾರಿಸುವ ಲಕ್ಷಣ ಕಂಡು ಬರಲಿಲ್ಲ. ಆದರೂ ನಾನು ಸದಾ ಕಂಪ್ಯೂಟರ್ ಮುಂದೆ ಕೂತಿರುವ ಸುದ್ದಿ ಅಕ್ಕಪಕ್ಕದ ಮನೆಗಳಿಗೆ ಗೊತ್ತಾಗಿದ್ದು ಕೆಲಸದ ನಂಜಿಯಿಂದಾಗಿ. ಒಂದು ದಿನ ಎದುರು ಮನೆಯ ಆಸ್ತಿಕ ಮಹಾಶಯರೊಬ್ಬರು ನಮ್ಮ ಮನೆಗೆ ಬಿಜಯಂಗೈದರು. ಅಂದರೆ ಸರಳಗನ್ನಡದಲ್ಲಿ

ದಯಮಾಡಿಸಿದರು. ಇದೊಂದು ಆಮಂತ್ರಣ ಪತ್ರಿಕೆ ಕನ್ನಡದಲ್ಲಿ ಟೈಪ್ ಮಾಡಿಕೊಡಿ ಮೇಡಂ. ಊರಿಗೆ ಹೊರಟಿದ್ದೇನೆ. ಎಲ್ಲರಿಗೂ ಹಂಚಬೇಕು ಎಂದು ಕೈಬರಹದ ಕಾಗದವೊಂದನ್ನು ನೀಡಿದರು.

ನೋಡಿದೆ. (ಅವರು ಬಾಗಿಲಿಗೇ ನಿಂತಿದ್ದರು. ಓಡಿದೆ ಎನ್ನುವಂತಿಲ್ಲ)–

*ಸಹೃದಯ ಸನ್ಮಿತ್ರರಲ್ಲಿ ವಿಜ್ಞಾಪನೆಗಳು,*

*ಇದೇ ಕಾರ್ತೀಕ ಶುದ್ಧ ಪೌರ್ಣಮಿಯಂದು ಜೀರ್ಣೋದ್ಧಾರಗೊಂಡಿರುವ ಗ್ರಾಮದ ದೇವಸ್ಥಾನದಲ್ಲಿ ಪ್ರತಿವರ್ಷದ ಆವರ್ತನದಂತೆ ಲಕ್ಷದೀಪೋತ್ಸವ, ಸುಬ್ರಹ್ಮಣ್ಯ (ಹೇ ದಯಾಮಯ ದೇವಾ) ಷಷ್ಠಿಯಂದು ರಥೋತ್ಸವಾದಿ ಸತ್ಸಂಕಲ್ಪಗಳನ್ನು ಇಷ್ಟದೇವತೆಯು ಹೃತ್ಕಮಲ ಸನ್ನಿಧಾನದಲ್ಲಿ ಸಂಪನ್ನಗೊಳಿಸುವ ಅಭೀಪ್ಸೆ ಹೊಂದಿದ ಗ್ರಾಮಸ್ಥರ ವಿಶ್ವಾಸ ಸಭೆ ಕರೆಯಲಾಗಿದೆ. ಭಗವದ್ಭಕ್ತರೂ ಆದ ತಾವು ಹೆಚ್ಚಿನ ಸಂಖ್ಯೆಯಲ್ಲಿ ಬಂದು ತನುಮನಧನಾದಿ ಕೈಂಕರ್ಯಗಳಿಂದ ಭಗವತ್ಕೃಪೆಗೆ* (ಡಬಲ್ ಒತ್ತಕ್ಷರ!) *ಪಾತ್ರರಾಗಬೇಕೆಂದು ಆಗ್ರಹಪೂರ್ವಕವಾಗಿ ನಿಮಂತ್ರಣ ನೀಡುತ್ತಿರುವ– ಶ್ರೇಯೋಭಿಲಾಷಿಗಳು.*

ತಲೆಸುತ್ತಿ ಬಂದಂತಾಗಿ, ಸರಳಗನ್ನಡ ಕೀಲಿಮಣೆಯಿಂದ ಹೊಡೆದಂತಾಗಿ ಕುಸಿದು ಕುಳಿತೆ. ಆಗುವುದಿಲ್ಲವೆಂದರೆ ಇಡೀ ಬಿಲ್ಡಿಂಗ್‌ನಲ್ಲಿ ಮರ್ಯಾದೆ ಹೋಗುವ ಸಂಭವ. ಮೊದಲ ಬಾರಿಗೆ ಕಣ್ಮುಚ್ಚಿ, ಹೇ ಭಗವಂತಾ, ನಾವು ಬಾಯಲ್ಲಿ ಹೇಳುತ್ತಾ ಹೋಗುವುದನ್ನು ಟೈಪ್ ಮಾಡಿಕೊಡುವ ವ್ಯವಸ್ಥೆಯಿದ್ದರೆ! ಎಂದು ಪ್ರಾರ್ಥಿಸಿದೆ. ಆಮೇಲೂ ಆ ಕೋರಿಕೆ ಅರ್ಜಿ ಅದೆಷ್ಟು ಸಲ ನನ್ನಿಂದ ಹೋಗಿದೆಯೋ...ಕಣ್ತೆರೆದು– ಈ ನಿಮ್ಮ ಬರಹ ನನ್ನ ಕಂಪ್ಯೂಟರ್‌ಗೆ ಅರ್ಥವಾಗುವುದಿಲ್ಲ, ಸ್ವಲ್ಪ ವಿಷಯ ಸರಳಗೊಳಿಸಿ ಬರೆಯುವುದಾದರೆ ಪ್ರಯತ್ನಪಟ್ಟೇನು ಅಂದು ಬಿಟ್ಟೆ. ಅಯ್ಯೋ, ಪರವಾಗಿಲ್ಲ....ಆ ಹಳ್ಳೀಲಿ ಕಂಪ್ಯೂಟರ್ ಬೇರೆ ಇಲ್ಲ. ಏನೋ ಒಂದು ಮಾಡಿ ಪ್ರಿಂಟ್ ತೆಗೆದುಕೊಡಿ ಎಂದಪ್ಪಣೆ ಕೊಡಿಸಿದರು. ಬದುಕಿದೆಯಾ ಸರಳಗನ್ನಡ ಜೀವಿ' ಎನ್ನುತ್ತಾ ನನ್ನದೇ ಶೈಲಿಯಲ್ಲಿ ಟೈಪ್ ಮಾಡಿಕೊಟ್ಟೆ.

"*ಊರ ಹಿರಿಯ ಕಿರಿಯ ಮಹನೀಯರೇ,*

*ನಾಳೆ ಇಳಿಹಗಲು ಊರ ದೇವಾಲಯದೊಳಗೆ ತಾವು ಆಗಮಿಸಬೇಕಾಗಿ ಕೋರಿಕೆ. ಜತೆಗೆ ಕುಳಿತು ತೀರೆಳೆಯುವ ಹಾಗೂ ಎಂದಿನ ಪೂಜೆ ಆರಾಧನೆ ಕುರಿತು ಮಾತಾಡಲಿದೆ. ಬರುವಿರಿ ತಾನೇ? ಜತೆಗಿರುವಿರಿ ತಾನೇ?*

*ಇತಿ.*

*ಸಕಲರಿಗೂ ಶುಭಕೋರುವ– ದೇವ ಸೇವಕರು.*"

ಎಂದು ಮುಗಿಸಿ ಒತ್ತ(ಡ)ಕ್ಷರ ರಹಿತ ಆಮಂತ್ರಣ ಪತ್ರಿಕೆ ಪ್ರಿಂಟ್ ತೆಗೆದುಕೊಂಡು ಓದಿ ನೋಡಿದ ಮಹಾನುಭಾವ ಭಗವದ್ಭಕ್ತರು, ಒಂದಾದರೂ ಒತ್ತಕ್ಷರವಿಲ್ಲದ ನಿಮ್ಮ ಕಂಪ್ಯೂಟರ್ ಭಾರೀ ಅಪರೂಪದ್ದು ಕಣ್ರೀ. ಎಂದು ಪ್ರಶಂಸಿಸಿ ಜೇಬಿಗಿಳಿಸಿ ಹೊರಟು ಹೋದರು. ಮತ್ತೆ ಆ ರಾತ್ರಿ ಮಲಗುವಾಗಲೂ ದೇವರೇ,

ಬಾಯಲ್ಲಿ ಹೇಳುತ್ತಾ ಹೋದಹಾಗೆ ಕನ್ನಡದಲ್ಲಿ ಟೈಪಿಸುವ ಒಂದು ವ್ಯವಸ್ಥೆಯನ್ನು ಕರುಣಿಸಲಾರೆಯಾ...? ಎಂದು ಪ್ರಾರ್ಥಿಸಿ, ನಿದ್ರಿಸಿದೆ.

ಬೆಳಗಾಗುವಷ್ಟರಲ್ಲಿ ಮಗಳು ಪೇಪರ್ ಹಿಡಿದು ಅಲುಗಾಡಿಸುತ್ತಿದ್ದಾಳೆ. ಅಮ್ಮ ಏಳು. ನಿನ್ನ ಪ್ರಾರ್ಥನೆ ದೇವರಿಗೆ ಕೇಳಿಸಿದೆ. ನಿನ್ನಂಥವರಿಗೆ(ಸರಳ್ಗನ್ನಡಿಗರಿಗೆ) ಎಂದೇ ಕೇಳಿ ಟೈಪಿಸುವ ಲಿಪಿಕಾರನೆಂಬ ಆಪ್ ಒಂದು ಬಂದಿದೆ. ನೀನಂದುಕೊಂಡ ಹಾಗೆ ಬಾಯಲ್ಲಿ ಹೇಳುತ್ತಾ ಹೋದರಾಯ್ತು...ಟೈಪ್ ಆಗಿ ಬರುತ್ತದೆ. ನಾನು ಆಗ್ಲೇ ನಿನ್ನ ಮೊಬೈಲ್‌ನಲ್ಲಿ ಡೌನ್ಲೋಡ್ ಮಾಡಿಟ್ಟಾಯ್ತು ಎಂದು ಸಂಭ್ರಮಿಸಿದ್ದನ್ನು ನೋಡಿದೆ. ಲಿಪಿಕಾರ'ನ ಅವತಾರವಾಗಿದ್ದು ನಿಜ. ವಾಯ್ಸ್ ಮೇಲ್ ಬಿಡುತ್ತಾ, ಹೇಳುತ್ತಾ ಹೋದರಾಯ್ತು. ಕೇಳಿಸಿಕೊಳ್ಳುತ್ತಿದ್ದೇನೆ ಎನ್ನುತ್ತಾನೆ ಲಿಪಿಕಾರ. 10 ಸೆಕೆಂಡ್ ಬಾಯಿಮುಚ್ಚಿ ಟೈಪ್ ಮಾಡುತ್ತ ಹೋಗುತ್ತಾನೆ. 4 ಸೆಕೆಂಡ್ ಇರುವಾಗ ಒಂದ್ನಿಮಿಷ ಇರಿ ಅನ್ನುತ್ತಾನೆ. ಮತ್ತು ನಮ್ಮ ಬಾಯಿಂದ ಉರುಳಿದ ಪದಗಳನ್ನು ಶಾಸ್ತ್ರೀಯವಾಗಿ ಟೈಪಿಸುವ ಪ್ರಕ್ರಿಯೆ ನಡೆಸಿ, ಎದುರಿಗಿಡುತ್ತಾ, ತುಂಬಾ ಮುಗ್ಧ ಮತ್ತು ನೇರ ನಡೆ-ನುಡಿಯ ಈ ಲಿಪಿಕಾರ, ಮಾತಿನ ನಡುವೆ ನಾವು ನಕ್ಕರೆ ಕೆಮ್ಮಿದರೆ ತೊದಲಿದರೆ ಪಾಪ ಕಕ್ಕಾಬಿಕ್ಕಿಯಾಗುತ್ತಾನೆ. ನಾನೋ ತಮಾಷೆಗೆ ಎಂಗಿನ್ನು ಎಂತಾ ಹೆದ್ರಿಕಿಲ್ಲೆ ಎಂದು ಹವ್ಯಕ ಭಾಷೆಯಲ್ಲಿ ಸಾರಿ ಹೇಳಿದಾಗ ಲಿಪಿಕಾರ ಆಗದು ನನಗೀ ಭಾಷೆ ಗೊತ್ತಿಲ್ಲ ಅಂದು ಬಿಟ್ಟ.

ಈ ಲಿಪಿಕಾರ ನನ್ನ ಮನೆಯೊಳಗೆ ಪ್ರವೇಶಿಸಿದ ದಿನದಿಂದ ನನ್ನ ಟೈಪಿಂಗ್ ಖದರೇ ಬದಲಾಗಿ ಹೋಗಿದೆ! ಸುಬ್ರಹ್ಮಣ್ಯ, ಷಣ್ಮುಖ, ತ್ರಯಂಬಕ, ತೀರ್ಥೋದ್ಭವ ಇವರೆಲ್ಲ ನನ್ನ ನಾಲಗೆಯಲ್ಲಿ ನಲಿದಾಡುತ್ತಾರೆ. ಪ್ರತೀ ಹತ್ತು ಸೆಕೆಂಡಿಗೆ ಉಕ್ತಲೇಖನ ನಿಲ್ಲಿಸಿ ಉಗುಳು ನುಂಗುತ್ತೇನೆ.(ತಾಳ್ಮೆಯ ಕಟ್ಟೆ ಒಡೆಯುವುದೇ ಇಲ್ಲ). ಕಂಚು-ಹಿತ್ತಾಳೆಯ ಪಾತ್ರೆಗಳೂ ಪಾತ್ರಗಳೂ ಥಳಥಳಿಸುತ್ತವೆ. ಹೃತ್ಕಮಲ ಅರಳಿಯೇ ಇರುತ್ತದೆ. ಒಮ್ಮೊಮ್ಮೆ ಇಂಗ್ಲಿಷ್‌ನಲ್ಲಿ ಷಟಪ್ ಎಂದು ಬೈದು ಲಿಪಿಕಾರನ ಕೈಕಟ್ಟಿಸಿಯೂ ಬಿಡುತ್ತೇನೆ. ರಾತ್ರಿ ಊಟ ಮುಗಿಸಿ, ರೂಮು ಸೇರುವ ಅಮ್ಮನ ಸ್ವಗತ ಶುರು ಎಂದು ಮಗಳು ನಕ್ಕರೂ ಕ್ಯಾರೇ ಎನ್ನದೆ ಹಠ ಹೊತ್ತು ಸಕಲರಿಗೂ ಕನ್ನಡದಲ್ಲೇ ಯೋಗಕ್ಷೇಮ ಸಂದೇಶ ಕಳಿಸುತ್ತೇನೆ. ಅರೆರೆ, ಎಷ್ಟು ಚೆಂದ ಟೈಪಿಂಗ್ ಕಲ್ತು ಬಿಟ್ಟೆ ಚಿಕ್ಕಮ್ಮಾ ಎಂದು ನನ್ನ ಸಾಫ್ಟ್ ಕುವರಿಯರೆಲ್ಲ ಬೆರಳು ಕಚ್ಚ ತೊಡಗಿದ್ದಾರೆ.

ಹಾಗೆಂದು ಬೀಗುತ್ತಾ ಕಣ್ಮುಚ್ಚಿ ಬಾಯಿಯಲ್ಲಿ ಹಲುಬುತ್ತಾ ಹೋದರೆ ಏನಾದೀತೆಂದೂ ನನ್ನ ಈ ಲಿಪಿಕಾರ ಆಗಾಗ ಬಿಸಿಮುಟ್ಟಿಸುತ್ತಾನೆ. ಪ್ರಿಂಟ್ 'ಪ್ರಕ್ರಿಯೆ'ಯಲ್ಲಿ ಓದಿ ನೋಡದೆ ಕಳಿಸಿದ ಸಂದೇಶಗಳು ಮಂಡೆ ಬಿಸಿ ಮಾಡಿದ್ದೂ ಇದೆ. 'ಎಂಥ ಮಾರಾಯ್ರೆ' ಎಂದೊಮ್ಮೆ ಹೇಳಿಬಿಟ್ಟೆ. 'ಎತ್ತಣ ಮರಿಯಾ' (ಎತ್ತಣ ಕನ್ನಡ) ಎಂದು ಸಂದೇಶ ಹೋಗಿ ನೂರು ಪ್ರಶ್ನಾರ್ಥಕ ಚಿಹ್ನೆಗಳ ಮರುಸಂದೇಶ ಬಂದಾಗಲೇ ಲಿಪಿಕಾರನ ಕಿತಾಪತಿ ತಿಳಿದದ್ದು.

ಸದಾಕಾಲ ವಟವಟ ಎನ್ನುವ ಮರುಳರ ಜಾತಿಗೆ ಸೇರಿಸಿದರೂ ದುರುಳ! ಅಂಜದೇ 'ಥ್ಯಾಂಕ್ಯೂ ಲಿಪಿಕಾರ' ಎಂದು ಟೈಪ್ ಮಾಡಿಸಿಯೇ ಸಿದ್ಧ. ಆತನೂ ಅಷ್ಟೇ. ಅಪ್ಯಾಯಮಾನದಿಂದ 'ಡನ್' ಎನ್ನುತ್ತಾನೆ. 'ಲಿಪಿಕಾರ'ನನ್ನು ಕಳಿಸಿಕೊಟ್ಟ 'ಹೃತ್ಕಮಲ'ದಾತನಿಗೆ ಶರಣು. ●

# ಸೋಸಿಯಲ್ ಮೀಡಿಯ - ಅಂದ್ರೇನ್ರೀ?

• ಸಿ.ಆರ್.ಸತ್ಯ

ಮೊನ್ನೆ ನಮ್ಮ ಕೇರಿಯಲ್ಲಿ ನಡೆದ ಹೊಸ ವರುಷದ ಆಚರಣೆಯಲ್ಲಿ ನಮ್ಮ ಬಡಾವಣೆಯ ಮಾಜಿ ಎಮ್.ಎಲ್.ಎ ಗಳೂ ಸದ್ಯಕ್ಕೆ ಸಮಾಜ ಸೇವಕರೂ ಆದ ಶ್ರೀಮಾನ್ ಭೋಪಯ್ಯನವರು ಮಾಡಿದ ಭಾಷಣದ ಒಂದು ತುಣುಕನ್ನು ನಿಮಗೆ ಒಪ್ಪಿಸ್ತಿದೀನಿ.

..........''ನಮ್ಮ ಬಡಾವಣೆಗೆ ನಾನು ಇನ್ನೂ ಏನೇನೋ ಒಳ್ಳೆ ಕೆಲಸಗಳನ್ನು ಮಾಡೋದಿತ್ತು. ಆದರೆ, ಈ ಸೋಸಿಯಲ್ ಮೀಡಿಯ ಅಂತ ಅಂತೀರಲ್ಲ, ಅದು ನನ್ನನ್ನ ಬಿಡ್ತಿಲ್ಲ. ಎಲ್ಲಿಂದ ಬಂತ್ರಿ ಈ ಸೋಸಿಯಲ್ ಮೀಡಿಯಾ? ಇದರ ವಿಷಯ ಗೊತ್ತಿಲ್ಲದೆ ನಾನು ಇಲ್ಲಿಯ ತನಕ ಹಾಯಾಗಿದ್ದೆ. ಇತ್ತೀಚೆಗೆ ನನ್ನ ಮೊಮ್ಮಗ ''ತಾತಾ, ನಾನು ನಿನ್ನನ್ನ ಸೋಸಿಯಲ್ ಮೀಡಿಯಾಗೆ ಸೇರಿಸ್ತೀನಿ. ನೀನು ಇನ್ನು ಮೇಲೆ ಫೇಸ್ಬುಕ್‌ನಲ್ಲಿ, ವಾಟ್ಸ್ಯಾಪ್‌ನಲ್ಲಿ, ಟ್ವಿಟರ್‌ನಲ್ಲಿ ಇರ್ತೀಯ.. ಪ್ರಪಂಚಕ್ಕೆಲ್ಲಾ ನೀನು ಮಾಡೋ ಕೆಲಸ ಗೊತ್ತಾಗುತ್ತೆ'' ಅಂತ ಅಂದ.

ಅದಕ್ಕೆ ನಾನು, ''ಅಲ್ಕಣಪ್ಪ, ನಾನು ಮಾಡೋ ಕೆಲಸಕ್ಕೆ ಪ್ರಚಾರಾನ ನನ್ನ ಪಾರ್ಟಿ ಸ್ನೇಹಿತರು ಆಗಲೇ ಮಾಡ್ತಿದಾರೆ. ಆಗೊಮ್ಮೆ ಈಗೊಮ್ಮೆ ನನ್ನ ಫೋಟೋ, ಹುಟ್ಟಿದ ಹಬ್ಬದ ಸುಭಾಶಯ-ಇವೆಲ್ಲಾ- ದೊಡ್ಡ ಬ್ಯಾನರ್‌ನಲ್ಲಿ ಹಾಕಿಸಿ, ದೀಪದ ಕಂಬಕ್ಕೆ, ನಮ್ಮ ರೋಡಿನಲ್ಲೋ ಟ್ರಾನ್ಸ್‌ಪಾರ್ಮರ್‌ಗೆ ಅಂಟಿಸ್ತಿದಾರೆ. ಅಷ್ಟು ಸಾಲದೇ...?'' ಅಂತ ಕೇಳಿದೆ.

''ಸಾಲದು, ತಾತಾ. ನೀನು ಮುಂದಕ್ಕೆ ದೇಶದ ನಾಯಕ ಆಗ್ಬೇಕಾದ್ರೆ ನೀನು ನಾನು ಹೇಳಿದಾಗೆ ಕೇಳು'' ಅಂತ ಅಂದ. ''ಅದಕ್ಕೆಲ್ಲಾ ನನಗೆ ಕಂಪ್ಯೂಟರ್ ವಿಷಯ ಗೊತ್ತಿಲ್ವಲ್ಲೋ ಮರೀ...?'' ಅಂತ ನುಣುಚಿಕೊಳ್ಳೋಕ್ಕೆ ಹೋದೆ ''ಅದಕ್ಕೆ ನಾನಿಲ್ವೇ ತಾ?. ಅದರಲ್ಲಿ ನಿನ್ನ ಬಗ್ಗೆ ಬರೋದೆಲ್ಲಾ ನಾನು ನಿನಗೆ ಬಂದು ತೋರುಸ್ತೀನಿ... ಆಯ್ತಾ?'' ಅಂತ ಕಣ್ಮರೆ ಆದ.

ಸುರು ಆಯ್ತು ನೋಡಿ ನನ್ನ ಕಷ್ಟಗಳು! ಒಂದು ದಿನ ಅವನ ಫೋನ್‌ನಲ್ಲೇ ಅದ್ಯೆಂತದೋ, ವಾಟ್ಸಾಪ್‌ನಲ್ಲಿ ಅವನು ಎಲ್ಲರಿಗೂ ಕಳಿಸಿದ್ದ ವಿಡಿಯೋ ತುಣುಕು ತೋರಿಸ್ದ. ಅದರಲ್ಲಿ ನಾನು ನಮ್ಮನೆ ಎಮ್ಮೆಯಿಂದ ಹಾಲು ಕರೀತಿರೋದು ತೋರಿಸಿ ಆ ಎಮ್ಮೆ ಹಿಂದೆ ಯಾವನೋ ಒಬ್ಬ 'ಭೋಪಯ್ಯನವರ ಕನಸು-ಭಾರತವನ್ನು ಹಾಲು ಸಕ್ಕರೆಯಲ್ಲಿ ಮುಳುಗಿಸೋದು! ದೇಶದ ಎಲ್ಲಾ ಹಿರಿಯರಿಗೂ ಕಿರಿಯರಿಗೂ ಉಚಿತವಾಗಿ ದಿನಕ್ಕೆ ಎರಡು ಸಲ ಪೌಷ್ಟಿಕವಾದ ಎಮ್ಮೆ ಹಾಲು ತಲಪಿಸೋದೇ ಅವರ ಧ್ಯೇಯ 'ಅಂತ ಬಡ್ಕೋತಿದ್ದ. ಅದಕ್ಕೆ ಉತ್ತರಾನೂ ಬಂತು. ಇನ್ನೊಬ್ಬ ಕಿಡಿಗೇಡಿ'' ಭೋಪಯ್ಯನವರಿಗೆ ಬಿಳಿ ಬಣ್ಣದ ಪಾನೀಯಗಳು ಎಂದರೆ ಇಷ್ಟ. ಇಷ್ಟು ವರುಷಗಳು ಪಾಪ. ಅರಾಕ್‌ನಲ್ಲಿ ಮುಳುಗಿರ್ತಿದ್ದರು. ಈಗ ಎಮ್ಮೆ ಹಾಲಿನ ಕಡೆ ಪ್ರೀತಿ ತೋರಿಸ್ತಿದ್ದಾರೆ''! ಅಂತ ನನ್ನ ಮಾನ ತೆಗೆದ. ಇನ್ನೊಬ್ಬ ''ಬೆಳ್ಳಗೆ ಇರೋದೆಲ್ಲಾ ಹಾಲು ಅಂತ ನಂಬಬೇಡಿ. ಭೋಪಯ್ಯನವರ ಮುಂದಿರೋದೂ ಎಮ್ಮೆ ಅಲ್ಲ, ಕೋಣ!' ಅಂತ ಬರೆದಿದ್ದ.

ಇನ್ನೊಂದು ಸಲ ನನ್ನ ತರಲೆ ಮೊಮ್ಮಗ, ಬ್ಯಾಂಕ್‌ನಲ್ಲಿ ನಾವು ಅಕೌಂಟ್ ತೆಗೆಯೋಲ್ವೆ? ಹಾಗೆ ಟ್ವಿಟರ್‌ನಲ್ಲಂತೆ, ನನ್ನ ಹೆಸರಿನಲ್ಲಿ ಅಕೌಂಟ್ ತೆಗೆದು, ನನಗೆ ಗೊತ್ತಿಲ್ಲದೇ ಎಲ್ಲರಿಗೂ ಒಂದು ಸುದ್ದಿ ಕಳಿಸಿದ – ಪ್ರಕೃತಿ ವಿಕೋಪದಿಂದ ಕೊಡಗು ತತ್ತರಿಸಿಹೋಗಿದೆ. ಇದರಿಂದ ನನಗೆ ಅಸಾಧ್ಯ ನೋವುಂಟಾಗಿದೆ. ಅದಕ್ಕಾಗಿ ನಾನು ನನ್ನ ಆಸ್ತಿಯೆಲ್ಲಾ ನನ್ನ ಕಾಲದ ನಂತರ ಮುಖ್ಯಮಂತ್ರಿ ಪರಿಹಾರ ನಿಧಿಗೆ ಬರೆದು ಕೊಡ್ತಾ ಇದೀನಿ– 'ಭೋಪಯ್ಯ–ಅಂತ. ಅದಕ್ಕೆ ತಕ್ಷಣ ಬಂತು ನೋಡಿ ಒಂದು ಉತ್ತರ: ಮುಖ್ಯ ಮಂತ್ರಿಗಳೇ, ಹುಷಾರು! ಭೋಪ್ಪಯ್ಯ ಕೊಡೋದು ಬರೀ ಬ್ಯಾಂಕ್‌ನ ಸಾಲದ ಪತ್ರಗಳು ಅಷ್ಟೆ! ಅವರಿಗಿರೋ ಆಸ್ತಿ ಅಂದರೆ ಒಂದು ಎಮ್ಮೆ ಅಷ್ಟೆ! ಅಂತ.

ಇನ್ನೊಬ್ಬ (ಇವನು ನಮ್ಮ ಪಕ್ಕದ ಮನೆ ರೌಡಿ ಅಂತ ನನ್ನ ಗುಮಾನಿ) ಕೂಡಿಟ್ಟಿಯೋ ಖೋಟಾ ನೋಟ್‌ಗಳಿಗೆ ಭೋಪಯ್ಯನವರಿಂದ ಪರಿಹಾರ! ಅಂತ ಬರೆದಿದ್ದ. ಇದರಿಂದ ಸುಧಾರಿಸ್ಕೊಳ್ಳೋದಕ್ಕೆ ಮುಂಚೇನೇ ಒಂದು ದಿನ ನನ್ನ ಮಗಳು ಫೋನ್ ಮಾಡಿ, ಅಪ್ಪಾ ಫೇಸ್ ಬುಕ್‌ನಲ್ಲಿ ನೀ ಇರೋದನ್ನ ನೋಡ್ತಿದೀನಿ ಅಂದ್ಲು. ನಾನು ಇಲ್ಲೇ ಮನೇಲೆ ಕೂತಿದ್ದಿನಲ್ಲಮ್ಮಾ..? ಅಂತ ಅಂದೆ. ಅದರಲ್ಲಿ ನೀನು ನಿನ್ನ ಫೋಟೋ ಪಕ್ಕದಲ್ಲಿ ನಮ್ಮ ಭೂಮಿ ಜಾಗತಿಕ ತಾಪಮಾನದಿಂದ ಪರಿಹಾರ ಪಡೀಬೇಕೂ ಅಂದರೆ, ಭಾರತದ ಪ್ರತಿಯೊಬ್ಬ ಹೆಂಗಸೂ ಬೆಳಿಗ್ಗೆ ಮನೆ ಮುಂದೆ ರಂಗೋಲಿ ಇಡೋದಕ್ಕೆ ಮುಂಚೆ, ಮೂರೋ ನಾಲ್ಕೋ ಬಕೆಟ್ ಅಷ್ಟು ನೀರನ್ನು ರಸ್ತೆ ಮೇಲೆ ಚಲ್ಲಿದರೆ ಸಾಕು, ನಮ್ಮ ಭಾರತದ ಭೂಮಿ ತಣ್ಣಗಾಗುತ್ತೆ– ಭೋಪಯ್ಯ 'ಅಂತ ಇದೆ ಅಪ್ಪ, ಅಂತ ಅಂದಳು. ಅದಕ್ಕೆ ಯಾರಾದರೂ ಪ್ರತಿಕ್ರಿಯೆ ಕೊಟ್ಟಿದಾರಾ? ಅಂತ ಕೇಳಿದೆ. ಅದಕ್ಕೆ ಅವಳು– ಒಬ್ಬರು, ಓಹೋ! ಬೋಪಯ್ಯನವರು ಕೇವಲ ಎಮ್ಮೆ ಹಾಲಿನ ಪರಿಣತರು ಅಂತ ಅಂದ್ಕೊಂಡಿದ್ವಿ. ಈಗ ಅವರು ಹವಾಮಾನ ತಜ್ಞರೂ ಆಗಿದ್ದಾರೆ! ಅಭಿನಂದನೆಗಳು–!! ಅಂತ ಹೇಳಿದಾರಪ್ಪ ಅಂದಳೂ.

ಮೊನ್ನೆ ಇನ್ನೊಂದು ಅಘಾತವಾಯ್ತು. ನನ್ನ ಮೊಮ್ಮಗ ವಾಟ್ಸ್ಯಾಪ್‌ನಲ್ಲಿ ಒಂದು ಫೋಟೋ ತೋರಿಸ್ದ. ಅದರಲ್ಲಿ ಕೆಂಪೇಗೌಡ ಪ್ರಶಸ್ತಿ ತೊಗೋತಿರೋ ಹಾಗೆ ನನ್ನ ಫೋಟೋ ಇತ್ತು.! ಇದೇನಪ್ಪಾ, ನನ್ನ ಜನ್ಮದಲ್ಲೇ ನಾನು ಪ್ರಶಸ್ತೀನೇ ಪಡೆದಿಲ್ಲಾ, ಈ ಫೋಟೋ ಎಲ್ಲಿಂದ ಬಂತು? ಅಂತ ಮೊಮ್ಮಗನ್ನ ಕೇಳಿದೆ. ಅದಕ್ಕೆ ಅವನು ಜೋರಾಗಿ ನಗ್ತಾ, ವರಿ ಮಾಡ್ಕೋಬೇಡ ತಾತಾ. ಇನ್ಯಾರದ್ದೋ ದೇಹಕ್ಕೆ ನಾನೇ ನಿನ್ನ ತಲೆ ಸೇರಿಸಿದೀನಿ. ತಮಾಶೆಗೆ. ಇದೆಲ್ಲಾ ಈಗ ಕಂಪ್ಯೂಟರ್‌ನಲ್ಲಿ ಮಾಡೋಕ್ಕೆ ಆಗುತ್ತೆ! ಅಂತ ಅಂದ. ಸ್ವಲ್ಪ ಹೊತ್ತಿಗೆ ನನ್ನ ಮಗಳು ಫೋನ್ ಮಾಡಿ, ಅಪ್ಪಾ, ಹ್ಯಾಶ್ ಟಾಗ್ ಮೀ ಟೂ ನಲ್ಲಿ ಯಾರೋ ನಿನ್ನ ಹೆಸರು ಹಾಕಿದಾರೆ ಅಂತ ಅಂದಳು. ಹಾಗಂದರೆ ಏನಮ್ಮಾ ಅಂತ ಕೇಳಿದೆ. ಅವಳು ವಿವರಿಸಿದಳು. ಇಪ್ಪತ್ತು ವರುಷಗಳ ಹಿಂದೆ ನಮ್ಮೂರ ಜಾತ್ರೇನಲ್ಲಿ ನಾನು ಯಾರದ್ದೋ ಸೀರೆ ಎಳೆದಿದ್ದೆನಂತೆ! ಆಗ ನಾನು ಮೂರ್ಛೆ ಹೋದೆ.

ಅದರ ವಿಷಯ ಆಮೇಲೆ ಕೇಳೊಕ್ಕೆ ಹೋಗಲಿಲ್ಲ. ಅದೇನು ಅಂತ ಇದುವರೆಗೂ ನನಗೆ ಅರ್ಥವಾಗಿಲ್ಲ. ಒಟ್ಟಿನಲ್ಲಿ ನನಗೆ ಮೊದಲಿನ ನೆಮ್ಮದಿ ಈಗಿಲ್ಲ. ಇನ್ನೊಂದು ಸಲ ನನ್ನ ಮೊಮ್ಮಗ ಕಣ್ಣಿಗೆ ಬೀಳಲಿ. ನಾಲ್ಕು ಜಾಡಿಸ್ತೀನಿ. ಇಷ್ಟು ಹೇಳಿ ನನ್ನ ಮಾತು ಮುಗಿಸ್ತಿದೀನಿ''.

# ಅಜ್ಜಿ ಪಟಾಲಂನ ಐಟಿ ಡ್ರೈವ್

• ಇ.ಆರ್. ರಾಮಚಂದ್ರನ್

ಅಜ್ಜಿ ಪ್ರತಿ ಶುಕ್ರವಾರ, ಹಬ್ಬ ಹರಿದಿನಗಳಲ್ಲಿ 'ಭಾಗ್ಯಾದ ಲಕ್ಷ್ಮಿ ಬಾರಮ್ಮಾ.' ಹಾಡೋವ್ರು. 'ಸಕ್ಕರೆ ತುಪ್ಪದ ಕಾಲುವೆ ಹರಿಸಿ' ಎಂದು ಅಜ್ಜಿ ಹಾಡುತ್ತಿದ್ದರೆ ನಾನು ಈಗಿರೋ ಬೆಲೆಗೆ ಕಾಲುವೆ ಇರಲಿ, ಒಂದು ಚಮಚ ಕೂಡ ಬರೊಲ್ಲ ಎಂದು ಮೂದಲಿಸಿದಾಗ ಇನ್ನೊಂದು ಸಲ ನನ್ನ ಮುಟ್ಟಕ್ಕೆ ಬಂದ್ರೆ ಕಾಲು ಮುರಿತೀನಿ' ಅಂತ ಮೂಲೇಲಿದ್ದ ದೊಣ್ಣೆನ ಕೈಗೆ ತೊಗೋಳೋವ್ರು.

ಸಂಜೆ ಅವರ ಪಟಾಲಂ ಜೊತೆ ಮನೆ ಹತ್ತಿರದ ರಾಮನ ದೇವಸ್ಥಾನದಲ್ಲಿ ನಡೆಯುತ್ತಿದ್ದ ಹರಿಕಥೆಗೆ ಹೋಗಿ 'ಸ್ಕಂದ ಪುರಾಣ', 'ವಟ ಸಾವಿತ್ರಿ ವ್ರತ' ಇತ್ಯಾದಿ ಕಥೆಗಳನ್ನು ಕೇಳಿ ಬರುತ್ತಿದ್ದರು. ಒಂದು ದಿವಸ ಎಲ್ಲರೂ ಬೇಗ ಬಂದು ಅವರವರಲ್ಲಿ ಗುಸಗುಸ ಮಾತು ಕೇಳಿಬಂತು. ನಾನು 'ಏನಜ್ಜಿ! ಏನು ಗುಟ್ಟಾಗಿ ಮಾತನಾಡ್ತಿದೀರಾ..? ಯಾವುದದ್ರೂ ಬ್ಯಾಂಕಿಗೆ ಕನ್ನ ಹಾಕ್ತಿದೀರಾ.. ಏನು ಕಥೆ? ಎಂದಾಗ.. 'ನಾಳೆಯಿಂದ ಮಾರ್ಗಶಿರ ಮಾಸ.. ಈ ತಿಂಗಳು ಪೂರ್ತಿ ಬೆಳಿಗ್ಗೆ ಪಾಠ, ಪ್ರವಚನ ಇದೆ... ಅದನ್ನೆ ಮಾತಾಡ್ಕೊಳ್ತಿದ್ವಿ... ಎಂದು ಹೇಳಿ ಅವರ ಗುಸಗುಸಕ್ಕೆ ಮತ್ತೆ ಸೇರ್ಕೊಂಡ್ರು.

***

ಒಂದು ತಿಂಗಳು ಆದ ಮೇಲೆ ಒಂದು ದಿವಸ ಪೇಪರ್ ಓದ್ತಿದ್ದಾಗ, ಅಜ್ಜಿ ಪೇಪರ್ ಮುಂದೆ ಒಂದು ಕಾಗದ ಇಟ್ಟು ಇದನ್ನು ಸ್ವಲ್ಪ ಓದು ಅಂದ್ರು... ನೋಡ್ದೆ.. ಎದೆ ಧಸಕ್ಕಂತು... ಸುಧಾ ಮೂರ್ತಿಯಿಂದ ಅಜ್ಜಿಗೆ ಇ–ಮೇಲ್. 'ಈ ವಯಸ್ಸಿನಲ್ಲಿ ನೀವೆಲ್ಲಾ ಕಂಪ್ಯೂಟರ್ ಕಲೀತಿರೋದು ನನಗೆ ಹೆಮ್ಮೆಯ ವಿಷಯ.. ನನಗೆ ಫೋನ್ ಮಾಡಿ ನಮ್ಮ ಆಫೀಸಿಗೆ ನಿಮ್ಮ ಸ್ನೇಹಿತರೊಡನೆ ಒಂದು ಸಲ ಬನ್ನಿ. ಒಟ್ಟಿಗೆ ಊಟ ಮಾಡೋಣ... ಇದರ ವಿಷಯ ನಿಮ್ಮ ಜೊತೆ ಇನ್ನೂ ಮಾತನಾಡಬೇಕು..' 'ಹ್ಯಾಗಿದೆಯೋ'? ಎಂದು ಅಜ್ಜಿ ತರಾಸು ಅವರ 'ವಿಜಯೋತ್ಸವ'ದ ನಗೆ ಬೀರಿದರು. 'ಇದೆಲ್ಲಾ ಯಾವಾಗ...' ಅನ್ನುವಷ್ಟರಲ್ಲೇ 'ಮಾರ್ಗಶಿರದಲ್ಲಿ ಸ್ಪೆಷಲ್ ಕ್ಲಾಸ್ಗೆ ಹೋಗ್ತಿದ್ವಲ್ಲಾ ಆವಾಗ್ಲೇ ಇದೆಲ್ಲಾ ಕಲಿತಿದ್ದು.. ಇಂಟರ್‌ನೆಟ್, ಇ–ಮೇಲ್, ಫೇಸ್‌ಬುಕ್... ನಿನ್ನ ಒಂದು ಸಲ ಕೇಳಿದ್ದೆ.. ಸೋಶಿಯಲ್ ಮೀಡಿಯಾ ಅಂತ ಹೇಳ್ತಾರಲ್ಲಾ... ಅದು ಏನು ಅಂತ, ಸೋಶಿಯಲಿಸ್ಟ್ ಪಾರ್ಟಿನಾ? ಸೋಷಿಯಲ್ಲಾಗಿ ಚೆಲ್ಲುಚೆಲ್ಲಾಗಿ ಗಂಡು ಬೀರಿಯ ಹಾಗೆ ನಗತಾ ಇರ್ತಾರಲ್ಲಾ ಅದಾ' ಅಂತ ನಿನಗೆ ಕೇಳಿದ್ದೆ. ನಿನಗೇ ಅದು ಸರಿಯಾಗಿ ಗೊತ್ತಿರಲಿಲ್ಲ.. ಪೆದ್ದು ಪೆದ್ದಾಗಿ ಏನೋ ಬುರುಡೆ ಹೊಡೆದೆ.. ಈಗ ನಾನು ನಿನಗೆ ಹೇಳ್ಕೊಡ್ತೀನಿ.. ಬಾ..' 'ಅಜ್ಜಿ ನನ್ನ ತಲೆ ಸಿಡೀತಿದೆ.. ಬಾಯಿ ಒಣಗಿದೆ.. ತಾಳು ಸ್ವಲ್ಪ ನೀರು ಕುಡ್ದು ಬರ್ತಿನಿ ತಡಿ..' ..'ನೀರು ಕುಡ್ದು ಬಾ... ಹಿಂದುಗಡೆ ಬಾಗಿಲ್ನಿಂದ ಓಡಿ ಹೋದ್ರೆ ಅಮೇಲೆ ಕಾಲು ಮುರೀತೀನಿ!'

ಇದಾದ ಸ್ವಲ್ಪ ದಿನಕ್ಕೆ ಅಜ್ಜಿ ಪಟಾಲಂ ಬೆಂಗಳೂರಿಗೆ ಹೋಗಿ ಸುಧಾ ಮೂರ್ತಿಯವರನ್ನು ನೋಡಿ ಬಂದರು. ಒಂದು ದಿನಕ್ಕೆ ಹೋದವರನ್ನು ಬಲವಂತದಿಂದ ಮೂರು ದಿನ ಅವರ ಮನೆಯಲ್ಲೇ ಅತಿಥಿಗಳಾಗಿ ಇರಿಸಿಕೊಂಡು ಸತ್ಕಾರ ಮಾಡಿ ಕಳಿಸಿಕೊಟ್ಟರು. ಅದಾದ ಮೇಲೆ ಅಜ್ಜಿ ಈಗ ಕಂಪ್ಲೀಟ್ ಚೇಂಜ್.

ಒಂದು ಸರ್ತಿ ನಾನು ಟಿವಿಲಿ ಕ್ರಿಕೆಟ್ ಮ್ಯಾಚ್ ನೋಡುತ್ತಿದ್ದೆ. ಇದ್ದಕ್ಕಿದಂತೆ ಅಜ್ಜಿ ಎಲ್ಲಿಂದಲೋ ಬಿರುಗಾಳಿಯ ಹಾಗೆ ಬಂದರು.

'ಅಜ್ಜಿ! ಇವಾಗೆಲ್ಲಾ ನೀನು ಮನೇಲೆ ಇರಲ್ವಲ್ಲಾ! ಎಲ್ಲಿ ಸುತ್ತೋದಕ್ಕೆ ಹೋಗಿದ್ದೆ?'

'ಸ್ವಲ್ಪ ತಡಿ. ನೀರು ಕುಡ್ದು ಬರ್ತೀನಿ. ಅಷ್ಟರಲ್ಲಿ ಇದನ್ನು ನೋಡ್ತಿರು.'

ಅಜ್ಜಿ ಅವರ ಲ್ಯಾಪ್‌ಟಾಪ್ ತೆಗೆದು ಮಂತ್ರ ಹಾಕೋ ಹಾಗೆ ಒಂದೆರೆಡು ಕೀ ಒತ್ತಿ ಹೋದರು. ಸ್ಕ್ರೀನ್ ನೋಡಿದರೆ ಎಲ್ಲೆಲ್ಲೂ ದೇವಸ್ಥಾನದ ಚಿತ್ರಗಳು. ಸ್ವಲ್ಪ ವರ್ಷಗಳ ಹಿಂದೆ ಅಮೆರಿಕದಲ್ಲಿದ್ದ ನನ್ನ ಅಣ್ಣ ಸೂರಿ ಇಲ್ಲಿಗೆ ಬಂದಾಗ ಅಜ್ಜಿಯನ್ನು ತೀರ್ಥಯಾತ್ರೆಗೆ ಕರೆದುಕೊಂಡು ಹೋಗಿದ್ದ. ಕಾಶಿ, ರಾಮೇಶ್ವರ, ಗಂಗೋತ್ರಿ, ಯಮುನೋತ್ರಿ, ಹರಿದ್ವಾರ, ಅಲಹಾಬಾದ್, ಮದುರೈ ಇತ್ಯಾದಿ. ಆ ಚಿತ್ರಗಳೆಲ್ಲವನ್ನೂ ಅಜ್ಜಿ ಹಳೇ ಕಬ್ಬಿಣದ ಟ್ರಂಕಿನಲ್ಲಿ ಹಾಕಿದ್ರು.. ಈಗ ಅದನ್ನೇ ತೆಗೆದು ಇನ್ಸಟಗ್ರಾಂನಲ್ಲಿ ಹಾಕಿದ್ದಾರೆ! ಸಾವಿರಕ್ಕೂ ಮೇಲೆ ಜನ ಅದನ್ನು 'ಲೈಕ್' ಮಾಡಿದ್ದರು. ಬಹಳ ಜನ ಅಜ್ಜಿಯವರನ್ನು ತಮ್ಮ ಜೊತೆ ಆ ಜಾಗಗಳಿಗೆ ಹೋಗಿ ಬರಲು ಆಹ್ವಾನಿಸಿದ್ದರು. ಯು ಎಸ್‌ನ 'ವರ್ಲ್ ಡ್ ಟೂರಿಸಮ್ ಆರ್ಗನೈಝೇಷನ್' ಅವರು ತಮ್ಮ ಹೊಸ ವರ್ಷದ ಬ್ರೋಚರ್ ಮುಖ ಪುಟಕ್ಕೆ ಅಜ್ಜಿಯ ಕಾಶಿ ವಿಶ್ವನಾಥ ದೇವಸ್ಥಾನದ ಚಿತ್ರವನ್ನು ಹಾಕಿದ್ದರು. ಒಳಗಡೆ ಅಜ್ಜಿಯ ಫೋಟೋ. 'ಫ್ಲಿಕರ್' ನವರು ಅಜ್ಜಿಯ ಫೋಟೋಗಳನ್ನು ಶೀರ್ಷಿಕೆಯನ್ನಾಗಿ ಮಾಡಿ ಇಡೀ ವರ್ಷ ಹಾಕಲು ಅಜ್ಜಿಯ ಒಪ್ಪಿಗೆ ಕೇಳಿದ್ದರು, ಡಾಲರ್‌ನಲ್ಲಿ ಸಂಭಾವನೆ ಜೊತೆಗೆ!

ನನಗೆ ಮತ್ತೆ ನೀರು ಕುಡಿ ಬೇಕೆನ್ನಿಸಿತು. ಅಜ್ಜಿನೇ ತಂದು ಕೊಟ್ಟರು.

'ಅಜ್ಜಿ.. ದಿಸ್ ಈಸ್ ವಂಡರ್ಫುಲ್ ಐಸೇ.. ನಮ್ಮ ಪಟಾಲಂನಿಂದ ಬೇರೆ ಯಾರಾದ್ರೂ ಹೀಗೆ ಮಾಡಿದಾರಾ?'

'ನಾವೆಲ್ಲಾರೂ ಕಲ್ತೀದೀವಿ.. ನಮ್ಮ ಸಾಫ್ಟ್ ವೇರ್ ಸೀತಮ್ಮ ನಿಟ್ಟಿಂಗ್ನಲ್ಲಿ ಹುಲಿ; ಸ್ವೆಟರ್, ಬ್ಯಾಗು, ಬುಟ್ಟಿ, ಶಾಲು ಎಲ್ಲಾ ಹೆಣೀತಾರೆ. ಅವರು ಹೆಣೆದಿದ್ದನ್ನು ಚಿತ್ರಿಸಿ, ಹೇಗೆ ಹೆಣೆಯ ಬೇಕು ಅಂತ ಕಂಪ್ಯೂಟರ್ನಲ್ಲಿ ಹಾಕಿದ್ದಾರೆ.

' ಯಾರು? ಸಣಕಲು ಸೀತಮ್ಮನಾ?'

' ಸಾಫ್ಟ್‌ವೇರ್ ಸೀತಮ್ಮ. ಅವರ ಹೆಣ್ಣು ಮಕ್ಕಳಿಬ್ಬರೂ ಸಾಫ್ಟ್‌ವೇರ್‌ನಲ್ಲಿ ಹುಲಿಗಳು. ಅದಕ್ಕೆ ಅವರಿಗೆ ಆ ಹೆಸರು ಬಂದಿದ್ದು.. ಅದಿರ್‍ಲಿ.. ಸೀತಮ್ಮ ಮಾಡಿಕೊಟ್ಟ

ಸ್ಯಾಂಪಲ್ನಿಂದ ದೊಡ್ಡ್ ಪ್ರಮಾಣದಲ್ಲಿ ಅದನ್ನು ತಯಾರಿಸಲು ಅಮೆರ್ಘಾನ್ ಶುರು ಮಾಡಿಕೊಂಡಿದ್ದಾರೆ.. ಆನ್‌ಲೈನ್‌ನಲ್ಲೂ ಮಾರಾಟ ಮಾಡ್ತಾರೆ. ನಿನಗೆ ಇನ್ನೂ ನೀರು ಬೇಕಾ?'

'ಇರ್ಲಿ.. ಬೇಕಾಗುತ್ತೆ. ನಿಮ್ಮ ಹಾರ್ಡವೇರ್ ಹರಿಣಿ ಏನು ಮಾಡ್ತಿದಾರೆ? ಅವರ ಸೈಜಿಗೆ ಹಾರ್ಡವೇರ್ ಹೆಸರು ಸರಿಯಾಗಿ ಒಪ್ಪುತ್ತೆ..'

'ಅವರಿಗೆ ಆ ಹೆಸರು ಬರಲು ಕಾರಣ ಅವರ ಗಂಡ ಅಶೋಕ ರೋಡಿನಲ್ಲಿ ಕೊಳಾಯಿ, ಪೈಪು ಸಾಮಾನು ಮಾರಾಟ ಮಾಡ್ತಾರೆ. ಅಷ್ಟೆ. ಹರಿಣಿಗೆ ಮುಂಚೆಯಿಂದ ತೋಟದ ಹುಚ್ಚು.. ಅವರ ಮನೆಯ ಕಾಂಪೌಂಡಿನಲ್ಲೇ ಗಿಡಗಳನ್ನು ಹಾಕಿ ಎಲ್ಲಾ ತರಹದ ಹೂ ಬೆಳೀತಾರೆ. ದಸರಾ ಹಬ್ಬ ದಲ್ಲಿ ಫ್ಲವರ್ ಷೊದಲ್ಲಿ ಪ್ರತಿವರ್ಷ ಪ್ರೈಜ್ ಹೊಡೀತಾರೊ.. ನಾವು ಬೆಂಗಳೂರಿಗೆ ಹೋದಾಗ ಅವರು ಬೆಳಸಿದ ಒಂದೆರೆಡು ಹೂ ತಂದಿದ್ದರು. ಅದರಲ್ಲಿ ಟ್ಯುಲಿಪ್ ಹೂವೂ ಇತ್ತು. ಸುಧಾ ಮೂರ್ತಿ ಮನೆಗೆ ಭೋಜನ ಕೂಟಕ್ಕೆ ಬಂದಿದ್ದ ಕಿರಣ್ ಮಜುಮ್ದಾರ್ ಷಾ ಟ್ಯುಲಿಪ್‌ನ ನೋಡಿ 'ಈ ಹೂಗಳಿಗೆ ಎಲ್ಲಾ ದೇಶದಲ್ಲಿ ಬೇಡಿಕೆ ಇದೆ. ಹಾಲೆಂಡ್ ಈ ಹೂವಿನಿಂದಲೇ ವರ್ಷಕ್ಕೆ ೬ ಬಿಲಿಯನ್ ಯೂರೊ ಅಷ್ಟು ಎಕ್ಸ್‌ಪೋರ್ಟ ಮಾಡ್ತಾರೆ.. ನಾವೂ ಸಣ್ಣದಾಗಿ ಶುರು ಮಾಡೋಣ' ಎಂದರು. ಅದಕ್ಕೆ ಮುಂಚೆ ಹರಿಣಿ ಬೆಳೆದ ಹೂ, ಅವರು ಗೆದ್ದ ಕಪ್ ಅವೆಲ್ಲವನ್ನೂ ಫೇಸ್ಬುಕ್, ಟ್ವಿಟರ‍್ಗಳಲ್ಲಿ ಹಾಕಿ ಎಲ್ಲರಿಗೂ ಅವರನ್ನು ಪರಿಚಯ ಮಾಡಿಕೊಡ್ತಾರೆ, ಕಿರಣ್. ಮುಂದಿನ ವಾರ ಸುಧಾ ಮತ್ತು ಕಿರಣ್ ಇಲ್ಲಿಗೆ ಬರ್ತಾರೆ.. ಮೈಸೂರಿನಲ್ಲಿ ಹೆಂಗಸರ ವಯಸ್ಸಾದವರ ಐಟಿ ಗ್ರೂಪ್ ಇದೆ. ಇದನ್ನು ಹೇಗೆ ವಿಸ್ತರಿಸಬೇಕು ಅನ್ನುವುದು ಅವರ ಪ್ಲಾನ್...ನಮ್ಮ ಮನೆಗೂ ಬರ್ತಾರೆ ಅವರಿಬ್ಬರೂ..'

'ಅಜ್ಜಿ.....'

'ಏನೋ ರಾಗ ಎಳೀತಿಯಾ..ನೀರು ಬೇಕಾ.. ಏನು ಹೇಳು.'

'ಇವತ್ತು ಶುಕ್ರವಾರ..'

'ಹೌದು.. ಅದಕ್ಕೇನು?'

'ಸ್ವಲ್ಪ ಹೊತ್ತಿನಲ್ಲಿ 'ನೀನು ಭಾಗ್ಯಾದ ಲಕ್ಷ್ಮಿ ಬಾರಮ್ಮಾ' ಹಾಡ್ತಿಯಲ್ಲಾ..'

'ಪ್ರತಿ ವಾರಾನೂ ಹಾಡ್ತಿನಿ...ಅದಕ್ಕೇನು..?

'ಈಗ ನೀನು 'ಸಕ್ಕರೆ ತುಪ್ಪದ ಕಾಲುವೆ ಹರಿಸುತ' ಅಂತ ಹಾಡಿದ್ರೆ ನಿಜವಾಗಿಯೂ ಒಪ್ಪತ್ತೆ ನೋಡು..'

'ರಾಮು.. ನೀನು ಹುಟ್ಟು ಪೆದ್ದಾ.. ಹೀಗೇ ಇದ್ಬಿಡ್ತಿಯೋಂತ ನಾನು ಬಹಳ ಹೆದರಿದ್ದೆ.. ನಿನಗೂ ಈಗ ಬುದ್ಧಿ ಚಿಗುರ್ತಾ ಇದೆ...!' ■

# ಡೇಟ್ ಬಾರ್ ಆದ ಬದಾಮ್ ಪೂರಿಯ ಕತೆ

• **ಅನಿತಾ ನರೇಶ್ ಮಂಚಿ**

ಮನುಷ್ಯ ಎಷ್ಟು ಜಾಗ್ರತೆ ಇದ್ರೂ ಸಾಲೋದಿಲ್ಲ. ಒಂದೊಂದಅಂದರೂ ತಪ್ಪಿಲ್ಲ ನೋಡಿ. ಕೆಲ ದಿನಗಳ ಹಿಂದೆ ಒಂದು ಫಂಕ್ಷನ್‌ಗೆ ಹೋಗಬೇಕಿತ್ತು. ಅದೇನೋ ಹೊರಡುವ ಗಳಿಗೆ ಸಮೀಪಿಸಿದಂತೆ ಹೋಗದಿದ್ರೂ ನಡೆಯುತ್ತೆ ಅನ್ನೋ ವೈರಾಗ್ಯ ಭಾವ ಕಾಡತೊಡಗಿ ತೆಗೆದಿರಿಸಿದ ಸೀರೆಯನ್ನು ಮತ್ತೆ ಕಪಾಟಿಗೆ ತಳ್ಳಿ ಮನೆಯಲ್ಲಿಯೇ ಆರಾಮವಾಗಿ ಕೂತಿದ್ದಾಯ್ತು. ಆರಾಮ ಅಂದ್ರೆ ಕೈಯಲ್ಲಿ ಮೊಬೈಲ್ ಇಲ್ಲದೇ ಇದ್ದರೆ ನಡೆಯುತ್ತದೆಯೇ? ವಾಟ್ಸಪ್, ಫೇಸ್‌ಬುಕ್‌ಗಳು ಅಂಗೈಲಾಡುವ ಗೊಂಬೆಗಳಂತೆ ಒಮ್ಮೆ ಅದು, ಇನ್ನೊಮ್ಮೆ ಇದು ಎಂದು ಕುಣಿದಾಡುತ್ತಿದ್ದವು. ಅದ್ಯಾಕೋ ಆ ದಿನದ ಗ್ರಹಚಾರ ನೆಟ್ಟಗಿರಲಿಲ್ಲ ಎಂದು ತೋರುತ್ತದೆ. ವಾಟ್ಸಪ್ ಸ್ಟೇಟಸ್ಸಿನಲ್ಲಿ 'ನಾನು ಮನೆಯ ರಾಣಿಯಾದರೂ ಇಂದು ಆಯ್ ಆಮ್ ಎ ಕಿಂಗ್, ರಿಲಾಕ್ಸಿಂಗ್' ಅಂತ ಹಾಕ್ಕೊಂಡು ಬಿಟ್ಟೆ.

ಮರುದಿನ ಪತಿದೇವರಿಗೆ ಫೋನ್ ಮಾಡಿ 'ನಾನಿರ್ಲಿಲ್ಲ ಊರಲ್ಲಿ' ಎಂದಿದ್ದೆ. ಆ ಕಡೆಯಿಂದ ಮಾತಿಲ್ಲ ಕಥೆಯಿಲ್ಲ. ಯಾಕಪ್ಪಾ ಇವರು ನನ್ನ ಮಾತನ್ನು ನಂಬುತ್ತಿಲ್ಲವೆಂದು ಗಾಬರಿಯಾದರೆ ಮುಸುಡಿಗೆ ಬಡಿಯುವಂತೆ ನನ್ನ ಸ್ಟೇಟಸ್ಸಿನ ಸ್ಕ್ರೀನ್ ಶಾಟನ್ನು ನನ್ನ ವಾಟ್ಸಾಪಿಗೆ ಕಳುಹಿಸಿ ಕೆಂಪು ಮೂತಿಯ ಇಮೋಜಿ ಬಳಿದಿದ್ದರು. ಮತ್ತೆ ಮೂರು ತಿಂಗಳು ಬೇಕಾಯಿತು ಸಂಬಂಧದ ಹೊಸ ಎಳೆ ಚಿಗುರಲು.

ಅದ್ಯಾಕೋ ಗೊತ್ತಿಲ್ಲ ಅಡುಗೆ ಮನೆಯಲ್ಲಿ ಹೊಸ ರುಚಿ ಮಾಡಿದ ಕೂಡಲೇ ಅದರ ಫೋಟೋ ತೆಗೆದು ಫೇಸುಬುಕ್ಕಿನ ಗೋಡೆಗಳಿಗೆ ಆಣಿ ಬಡಿದು ತಗಲಾಕುವುದು ನನಗಿಷ್ಟದ ವಿಷಯ. ಅದು ಆ ದಿನವೇ ಹಾಕುತ್ತೇನೆಂದಲ್ಲ. ಕೆಲವೊಮ್ಮೆ ಫೋಟೋ ಸಿದ್ಧವಾಗಿ ಹಾಕುವಾಗ ಮಾಡಿಟ್ಟ ತಿಂಡಿ ಖಾಲಿಯಾಗಿ ಅದರ ತಿಥಿ ಕರ್ಮಾಂತರಗಳೂ ಮುಗಿಯುವಷ್ಟು ದಿನಗಳಾಗಿರುತ್ತದೆ.

ಹೀಗೇ ಒಮ್ಮೆ ಡೇಟ್ ಬಾರ್ ಆದ ಬಾದಮ್ ಪೂರಿಯ ಫೋಟೋ ಹಾಕಿಕೊಂಡಿದ್ದೆ. ಅದೇ ದಿನ ನಮ್ಮ ಮನೆಗೆ ದೂರದ ನೆಂಟರೊಬ್ಬರು ಬರಬೇಕೇ. ಅವರದು ಅನಿರೀಕ್ಷಿತ ಭೇಟಿ. ನನ್ನ ತಿಂಡಿಡಬ್ಬಗಳೆಲ್ಲಾ ಡಿಪೋ ಕಡೆಗೆ ಹೋಗುವ ಗವರ್ನಮೆಂಟ್ ಬಸ್ಸಿನಂತೆ ಖಾಲಿಯಾಗಿದ್ದವು. ತಲೆ ಖರ್ಚು ಮಾಡಿ ಒಂದಿಷ್ಟು ಹುರಿದವಲಕ್ಕಿಯ ಜೊತೆಗೆ ಕಾಫಿ ಕೊಟ್ಟೆ. ಅವರು ಮಾತಿನ ನಡುವಿನಲ್ಲಿ 'ನನಗೆ ಶುಗರ್ ಗಿಗರ್ ಏನೂ ಇಲ್ಲಮ್ಮಾ.. ಹೆಲ್ತಿ ಅಂಡ್ ಫಿಟ್ ಬಾಡಿ..' ಎಂದು ತಮ್ಮನ್ನು ತಾವು ಸುಮಾರು ಸಲ ಘೋಷಿಸಿಕೊಂಡರು. ನಾನು ತಲೆಯಾಡಿಸುತ್ತಾ ಕುಳಿತಲ್ಲಿಂದಲೇ ಅವರ ಅದೃಷ್ಟವನ್ನು ಹೊಗಳಿದೆ. ಕೊನೆಗವರು ಹೇಳಿಯೇಬಿಟ್ಟರು: 'ಬಾದಾಮ್ ಪೂರಿ ನಂಗಿಷ್ಟ ಕಣಮ್ಮ, ಒಂದೆರಡು ಹಾಕು. ಫೇಸ್‌ಬುಕ್ಕಿನಲ್ಲಿ ನಿನ್ನ ಫೋಟೋ ನೋಡಿ ಲೈಕ್ ಹೊಡೆದು ಕಮೆಂಟು ಕೂಡಾ ಹಾಕಿದ್ದೀನಿ, ನೀನು ಅಲ್ಲಿ ಲೈಕ್ ಥ್ಯಾಂಕ್ಸು ಎಲ್ಲಾ ಹೇಳಿದೀಯ, ಇಲ್ಲಿ ಖಾಲಿ ಅವಲಕ್ಕಿ ಕೊಡ್ತಾ ಇದ್ದೀಯಾ' ಎಂದುಬಿಡಬೇಕೇ? ಕೊನೆಗವರಿಗೆ ಸತ್ಯ ಸಂಗತಿ ತಿಳಿಸಿ ಕ್ಷಮಾಪಣೆ ಕೇಳಿದ್ದಾಯ್ತು.

ಈಗ ಒಂದು ಉಪಾಯ ಮಾಡಿದ್ದೇನೆ. ಡೇಟ್ ಬಾರ್ ಆದ ಸ್ಟೇಟಸ್ಸುಗಳನ್ನು, ಮತ್ತು ಫ್ರೆಶ್ ಆದ ತಿಂಡಿ ತಿನಿಸುಗಳನ್ನು ಅಪ್‌ಲೋಡಿಸಿ ಇಂತಹ ತೊಂದರೆಗಳಿಂದ ಬಚಾವಾಗಿದ್ದೇನೆ.. ನೀವೂ ಟ್ರೈ ಮಾಡಿ. ■

TEMPLE OF KNOWLEDGE

DISTANCE EDUCATION
(Govt. & UGC Recognised Universities)

# BEECHI VIDYA KENDRA

ADMISSION OPEN - APPLY NOW

## CENTER OF DISTANCE LEARNING

MBA WITH 6 SPECIALIZATIONS, MA, M.COM, MCA, MSc-BT, PGDCS, BA & B.COM - AGE BASIS

Email : admin@beechi.in Web : www.becchi.in
Mob. 9035302302, 9035007003

## PLACEMENT SERVICES FOR :

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

TEMPLE OF KNOWLEDGE

Email : admin@beechi.in
Web : www.becchi.in
Mob. 9740968677

# ಆನ್‌ಲೈನ್ ತಿಥಿ !

**• ಗಣೇಶ ಹೆಗ್ಗಡೆ**

"ರ್ರೀ ಮುಂದಿನ ತಿಂಗಳು ನಿಮ್ಮಮ್ಮನ ತಿಥಿ, ನಿಮ್ಮ ತಮ್ಮ ಶ್ರೀಕಂಠೂಗೆ ಅಮೆರಿಕೆಯಿಂದ ಬರೂಕ್ಕೆ ಆಗ್ತಾಯಿಲ್ಲವಂತೆ. ಹಾಗಂತ ಈ ಕಾರ್ಯ ಕಲಾಪದಿಂದ ವಿಮುಕ್ತನಾಗಲೂ ಅವನಿಗೆ ಮನಸ್ಸಿಲ್ಲವಂತೆ. ಏನು ಮಾಡೋದು?"

'ಸರೀ ಪದ್ದಿ ನಾಳೇನೆ ಶಾಸ್ತ್ರಿಗಳ ಮನೆಗೆ ಹೋಗಿ ಬರ್ತೇನೆ'

* *

ಮಾರನೆಯ ದಿನ ಶಾಸ್ತ್ರಿಗಳನ್ನ ನೋಡಿ 'ಶಾಸ್ತ್ರಿಗಳೆ, ನಾನೊಂದು ಧರ್ಮ ಸಂಕಟದಲ್ಲಿ ಸಿಕ್ಕಿ ಹಾಕಿಕೊಂಡಿದ್ದೇನೆ' ಎಂದು ಮಾತಿಗಾರಂಭಿಸಿದೆ.

"ಅಲ್ಲಯ್ಯ, ನಾವು ಅನೂಚಾನವಾಗಿ ನಂಬಿರುವ ಹಿಂದೂ ದೇವರುಗಳೇ ಲಂಗು ಲಂಗಾಮಿಲ್ಲದ ನಾಲಿಗೆಗಳಿಂದ ಧರ್ಮ ಸಂಕಟಕ್ಕೆ ಸಿಕ್ಕಿರುವಾಗ ನಿನ್ನದೇನಯ್ಯಾ ಹೆಚ್ಚುಗಾರಿಕೆ, ಏನಯ್ಯಾ ನಿನ್ನ ಪ್ರಾಬ್ಲಮ್?"

ನನ್ನ ಅಥವಾ ಶ್ರೀಕಂಠನ ಸಮಸ್ಯೆ ವಿವರಿಸಿದೆ.

"ಇಷ್ಟೆ ತಾನೆ, ನಾನು ಈ ತಿಥಿಯನ್ನು ಇಂಟರ್ನೆಟ್ಟಿನಲ್ಲಿ ಮಾಡಿಸ್ತೀನಿ. ಆ ದಿನ ಫ್ರೀ ಮಾಡ್ಕೊಂಡು ಅವನು ಸಮಯಕ್ಕೆ ಸರಿಯಾಗಿ ಮಡಿಯುಟ್ಟು ಲ್ಯಾಪ್‌ಟಾಪ್ ಮುಂದೆ ಕುಳಿತುಕೊಂಡ್ರೆ ಸಾಕು. ಕಲಾಪಕ್ಕೆ ಒಂದಿಷ್ಟು ದರ್ಬೆ, ತುಳಸಿ, ಕರಿ ಎಳ್ಳು, ಹೂವು, ಪಂಚಪಾತ್ರೆ, ಉದ್ಧರಣೆ, ಇತ್ಯಾದಿಗಳನ್ನು ಅಮೆಜಾನಿನಲ್ಲಿ ತರಿಸಿಕೊಳ್ಳಲಿ."

* *

ಆ ದಿನ ಬಂದೇ ಬಿಟ್ಟಿತ್ತು. ಪದ್ದಿ ತಿಥಿಗೆ ಎಲ್ಲಾ ಅಣಿ ಮಾಡಿಕೊಂಡಿದ್ದಳು. ಸಮಯಕ್ಕೆ ಸರಿಯಾಗಿ ಶಾಸ್ತ್ರಿಗಳು ಲ್ಯಾಪ್‌ಟಾಪ್ ಸಮೇತ ಆಗಮಿಸಿದರು. 'ಲ್ಯಾಪ್‌ಟಾಪ್‌ನಲ್ಲಿ ನಿಮ್ಮ ಶ್ರೀಕಂಠುಗೆ ಸ್ಕೈಪ್‌ನಲ್ಲಿ ಬರೂಕ್ಕೆ ಹೇಳಯ್ಯಾ, ಅವನಿಗೆ ಕೆಲವು ಪೂರ್ವ ಸಿದ್ಧತಾ ಸೂಚನೆಗಳನ್ನು ಕೊಡ್ಬೇಕು' ಅಂತಂದರು.

ಲ್ಯಾಪ್‌ಟಾಪ್ ಆನ್ ಮಾಡಿ ಮಲಗಿದ್ದ ಶ್ರೀಕಂಠನನ್ನು ಎಬ್ಬಿಸಿ 'ಇದೇನೊ ಹೀಗೆ ಮಲಗಿದ್ದೀಯಾ, ಅಮ್ಮನ ತಿಥೀಗೆ ರೆಡಿಯಾಗುಲ್ವೇನೊ. ಶಾಸ್ತ್ರಿಗಳು ಬಂದು ಆಗಲೆ ಇಪ್ಪತ್ತು ನಿಮಿಷವಾಯ್ತು' ಅಂದೆ. ನನ್ನ ದನಿ ಕೇಳಿ ಶ್ರೀಕಂಠು ಬೆಚ್ಚಿ ಬಿದ್ದವನೆ ರಗ್ಗುಗಳನ್ನು ಝಾಡಿಸಿ ಒದ್ದು, ಎದ್ದು "ಈಗ ಮಧ್ಯರಾತ್ರಿ ಎರಡು ಘಂಟೆ. ಈಗೆಂಥಾ ತಿಥಿ?" ಅಂತ ಮೆಲ್ಲಗೆ ಗದರಿಕೊಂಡ.

'ಶಾಸ್ತ್ರಿಗಳೇ ಒಂದು ಅಚಾತುರ್ಯವಾಗಿ ಹೋಗಿದೆ. ನಮಗೂ, ಅವನಿಗೂ ಹದಿನಾಲ್ಕು ಘಂಟೆ ಟೈಮ್‌ಲ್ಯಾಗ್ ಇದೆ' ಎಂದು ಬಿನ್ನವಿಸಿಕೊಂಡೆ. 'ಕೊಂಚ ಅವನಿಗೆ ಕನೆಕ್ಟ್ ಮಾಡಿಕೊಡಯ್ಯ, ನಾನೇ ಸಮಝಾಯಿಷಿ ಕೊಡುತ್ತೇನೆ' ಅಂತಂದರು ಶಾಸ್ತ್ರಿಗಳು. ಪದ್ದಿ ಕನೆಕ್ಟು ಮಾಡಿಕೊಟ್ಟಳು.

‘ಸಾರಿ ಕಣಯ್ಯ ಶ್ರೀಕಂಠು. ಇಲ್ಲಿ ನಿಮ್ಮಣ್ಣ ಕರ್ತೃ. ಹೀಗಾಗಿ ಇಲ್ಲಿನ ಸಮಯವೇ ನಮಗೆ ಮುಖ್ಯ. ತಡಮಾಡದೆ ನೀನು ಸ್ನಾನ ಮಾಡಿ ಮಡಿಪಂಚೆ ಉಟ್ಟು, ಟವಲ್ಲು ಹೊದ್ದು ಲ್ಯಾಪ್‌ಟಾಪಿನ ಮುಂದೆ ಕುಳಿತುಕೋ, ಮುಂದಿನ ಜವಾಬ್ದಾರಿ ನನ್ನದು’ ಎಂದರು ಶಾಸ್ತ್ರಿಗಳು.

ಸ್ನಾನ ಮಾಡಲು ಹೋದ ಶ್ರೀಕಂಠು ಮತ್ತೆ ಸ್ಕೈಪಿನಲ್ಲಿ ಲೈನಿಗೆ ಬಂದ. “ಶಾಸ್ತ್ರಿಗಳೆ ಇಲ್ಲಿ ಸಿಕ್ಕಾಪಟ್ಟೆ ಚಳಿ ಇದೆ. ಮೈನೆಸ್ ಮೂರು ಡಿಗ್ರಿ ಟೆಂಪರೇಚರ್ರು ಇದೆ. ಹಾಲಿನಲ್ಲಿ ಹೀಟರ್ ಬೇರೆ ಕೆಟ್ಟು ಹೋಗಿದೆ. ನಾನು ತೆಳು ಪಂಚೆ ಉಟ್ಟು, ಬರೀ ಮೈಯಲ್ಲಿ ಕುಳಿತರೆ ಫ್ರೀಜ್ ಆಗಿ ಹೋಗ್ತೀನಿ’ ಎಂದ ಶ್ರೀಕಂಠು.

“ಥರ್ಮಲ್‌ವೇರ್ ಬಟ್ಟೆಯಿದ್ರೆ ಬೆಚ್ಚಗೆ ಧರಿಸಿ ಕುಳಿತುಕೊಳ್ಳಯ್ಯ. ಆ ಬಟ್ಟೆ ಮೇಲೆ ಜನಿವಾರ ಬರಲಯ್ಯ, ಈಗ ಎರ್ಡು ಸರ್ತಿ ಆಚಮನ ಮಾಡಯ್ಯ’ ಎಂದು ಆಜ್ಞಾಪಿಸಿದರು ಶಾಸ್ತ್ರಿಗಳು.

‘ಆಚಮನ ಮಾಡಲು ಆಗ್ತಾನೇ ಇಲ್ಲ. ಶಾಸ್ತ್ರಿಗಳೆ..’ ಎಂದು ಗಾಬರಿಯ ದನಿಯಲ್ಲಿ ಶ್ರೀಕಂಠು ಕೂಗಿಕೊಂಡ.

‘ಏನಾಯ್ತಯ್ಯಾ?

‘ಪಂಚಪಾತ್ರೆಯಲ್ಲಿರುವ ನೀರು ಕೊರೆಯುವ ಚಳಿಗೆ ಐಸ್! ಆಗಿ ಹೋಗಿದೆ. ಏನ್ಮಾಡಲಿ?”.

‘ಹೋಗ್ಲಿ ಬಿಡಯ್ಯ ಆ ಪಂಚಪಾತ್ರೆಗೇ ಕೈ ಮುಗಿದು ಹತ್ತು ಗಾಯತ್ರೀ ಮಾಡಿ, ತಲೆಯ ಮೇಲೆ ಎರಡು ಅಕ್ಕಿ ಕಾಳನ್ನು ಹಾಕಿಕೊಂಡು ದರ್ಭೆಯಿಂದ ಪವಿತ್ರ ಮಾಡ್ಕೊಂಡು ಧರಿಸ್ಕೊಳ್ಳಯ್ಯ” ಎಂದು ಶಾಸ್ತ್ರಿಗಳು ಆಜ್ಞಾಪಿಸುವುದಕ್ಕೂ ಲ್ಯಾಪ್‌ಟಾಪಿನಲ್ಲಿ ಏನೋ ಪ್ರಾಬ್ಲಂ ಆಗಿ ಆಡಿಯೊ..ವೀಡಿಯೊ ಎರಡೂ ಫೇಲ್ ಆಗಿ ಸ್ಕೈಪಿನಲ್ಲಿದ್ದ ಶ್ರೀಕಂಠು ದಿಢೀರನೆ ಎಸ್ಕೇಪ್ ಆಗುವುದಕ್ಕೂ ತಾಳೆಯಾಗಿತ್ತು. ಶ್ರೀಕಂಠು ಅಕ್ಕಿಯ ಕಾಳನ್ನು ತಲೆಯ ಮೇಲೆ ಹಾಕಿಕೊಂಡನೋ ಅಥವಾ ನಿದ್ದೆಗಣ್ಣಲ್ಲಿ ಬಾಯಿಗೆಸೆದು ಕೊಂಡನೊ ಎಂಬ ಜಿಜ್ಞಾಸೆಯಲ್ಲಿ ನಾನು ಮುಳುಗಿರುವಾಗ ಪದ್ದಿ, ಲ್ಯಾಪ್‌ಟಾಪ್ ಪರೀಕ್ಷಿಸಿ ‘ರ್ರೀ ಸರ್ವರ್ ಡೌನ್ ಆಗಿದೆ. ಇಂಟರ್ನೆಟ್ ಫೇಲಾಗಿದೆ. ಈಗ ಮಾಮೂಲಿನಂತೆಯೆ ತಿಥಿ ಪ್ರಾರಂಭಿಸ್ರಿ, ಶ್ರೀಕಂಠೂಗೆ ಸ್ವಯಂಪಾಕ ಕೊಡುವುದಕ್ಕೆ ಹೇಳಿದರಾಯಿತು ಎಂದು ಸಲಹೆ ಕೊಟ್ಟಳು. ಶಾಸ್ತ್ರಿಗಳಿಗೂ ಹೋದ ಜೀವ ಬಂದಂತಾಗಿ ಕಲಾಪವನ್ನು ಅಂತೂ ಇಂತು ಮುಂದುವರಿಸಿ ಮುಗಿಸಿಕೊಟ್ಟರು.

ಗೇಟಿನಾಚೆಗೆ ಹೋಗುತ್ತಿದ್ದ ಬ್ರಾಹ್ಮಣರನ್ನು ನೋಡಿ ಪದ್ದಿ, ‘ರ್ರೀ ಹೋಗುವ ಮುನ್ನ ಆ ಬ್ರಾಹ್ಮಣರು ಸಂತೃಪ್ತಿಯಿಂದ ನಮ್ಮನ್ನು ಏನೆಂದು ಹರಸಿದರು ಗೊತ್ತೆ?’ ಎಂದು ಕೇಳಿದಳು. ಅದೇನೊ ಕಿವಿಗೆ ಬಿದ್ದ ಹಾಗಾಯ್ತು ಕಣೆ ಅದೇ ‘ಸರ್ವೇ ಜನೋ ಸುಖಿನೋಭವಂತು’ ಅಂತ ಅಂದೆ.

‘ಅಲ್ಲಾರಿ ಸರ್ವರ್ ಜನೊ ಸುಖಿ ನೊ ಭವಂತು’ ಎಂದು ಹರಸಿ ಹೋದರು ಕಣ್ರೀ ಎಂದಳು.

■

# ಲೈಕೋ ರಕ್ಷತಿ ಲೈಕಿತಃ

● ಎನ್. ರಾಮನಾಥ್

'ಏನಾಯಿತೋ ಸೀನು?'

ಸಕಲ ಸೀರಿಯಲ್‌ಗಳು ಹೊರಹೊಮ್ಮಿಸುವ ಟೋಟಲ್ ದುಃಖವೇ ಮೂರ್ತಿವೆತ್ತಂತೆ ಕುಳಿತಿದ್ದ ಸೀನುವನ್ನು ಕೇಳಿದೆ.

'ಫೋರ್ ಮಿನಿಟ್ಸ್ ಆಯಿತು ನನ್ನ ಕವನ ಪೋಸ್ಟ್ ಮಾಡಿ. ಒಂದೇ ಒಂದು ಲೈಕೂ ಇಲ್ಲ' ರಾಮನನ್ನು ಕಾಡಿಗಟ್ಟು ಎಂದು ಕೈಕೇಯಿ ಹೇಳಿದಾಗ ದಶರಥನ ಕಂಠದಲ್ಲಿ ಮೂಡಿದ್ದಷ್ಟು ದುಃಖವಿತ್ತು ಸೀನುವಿನ ದನಿಯಲ್ಲಿ.

'ಲೈಕ್ ಗಿಟ್ಟಿಸಲು ಪೋಸ್ಟಿಸಬೇಕಾದ್ದು ಕವನವಲ್ಲ, ವದನ' ಎಂದೆ. ಸಹರಾ ಮರುಭೂಮಿಯಂತಹ ತಲೆ, ಕಟಿಂಗ್ ಪ್ಲೈಯರ್‌ನ ಹಿಡಿಗಳಂತೆ ವಿರುದ್ಧ ದಿಕ್ಕುಗಳಲ್ಲಿ ನೋಡುವ ಕಣ್ಣುಗಳಿರುವ ನನ್ನ ವದನದ ಚಿತ್ರ ಪೋಸ್ಟ್ ಮಾಡಿದಾಗಲೂ ನೂರಾರು 'ಲೈಕ್ಸ್' ಬರುತ್ತವೆ. ಸೀನು ಈಸ್ ಎ ಕ್ರಾಸ್ ಬಿಟ್ವೀನ್ ರಾಜ್ ಕುಮಾರ್ & ಶಾರೂಖ್ ಖಾನ್ ಅವನ ಪ್ರೊಫೈಲ್ ಪ್ರಕಾರ.

'ನನ್ನ ಫೋಟೋ ಹಾಕಕ್ಕಾಗಲ್ಲ ಕಣೊ'

'ಯಾಕೆ?'

'ನನ್ನ ನಿಜವಾದ ಫೋಟೋನ ಪ್ರೊಫೈಲ್ ಪಿಕ್‌ಗೆ ಹೋಲಿಸಿದರೆ ನಿಜ ತಿಳಿದುಬಿಡತ್ತಲ್ಲ...'

'ಡೋಂಟ್ ವರಿ. ಯಾರೂ ಅವರ ಪ್ರೊಫೈಲ್ ಪಿಕ್ಚರ್‌ನಷ್ಟು ಚೆನ್ನಾಗಿಯಾಗಲಿ, ಆಧಾರ್ ಕಾರ್ಡ್‌ನಲ್ಲಿರುವ ಚಿತ್ರದಷ್ಟು ಕೆಟ್ಟದಾಗಿ ಇರಲ್ಲ, ನೈಜ ಚಿತ್ರಣ ಈಸ್ ಬಟ್ ದ ಆವರೇಜ್ ಆಫ್ ದೀಸ್ ಟೂ ಅನ್ನೋದು ಓಪನ್ ಸೀಕ್ರೆಟ್' ಎಂದೆ.

ಅಷ್ಟರಲ್ಲಿ ಅವನ ಕವನಕ್ಕೆ ಯಾವುದೋ 'ರಿಯಾಕ್ಷನ್' ಬಂತು. ಶುರುವಾಯಿತು ನಿಮಿಷನಿಮಿಷಕ್ಕೂ ಎಫ್‌ಬಿಯತ್ತ ದೃಷ್ಟಿಹರಿಸುವ ಗೀಳು. 'ಪ್ಲಿಂಕನೆ ಸೆಲ್‌ಫೋನ್ ಸೌಂಡಿಸೊಡೆಂ, ಲೈಕ್ ಪೋಕ್ ಕಾಮೆಂಟ್ಸ್ ಮೂಡಿದೊಡೆಂ, ಆರಂಕುಶವಿಟ್ಟೊಡಂ ನೆನೆವುದೆನ್ನ ಬೆರಳ್ ಎಫ್‌ಬೀಯ ಕ್ಷೇತ್ರಮಂ' ಎನ್ನುವುದೇ ಸೀನುವಿನ 'ಹಾದಿಪುರಾಣ'!

ಒಬ್ಬೊಬ್ಬರಿಗೆ ಒಂದೊಂದು ಇಷ್ಟ. ಕೆಲವರಿಗೆ ಚೀಸ್ ಬರ್ಗರ್; ಕೆಲವರಿಗೆ ಹ್ಯಾಮ್ ಬರ್ಗರ್; ಸೀನುವಿಗೆ ಝುಕರ್ ಬರ್ಗರ್!

'ಯಾವಾಗಲೂ ಎಫ್‌ಬಿಯಲ್ಲಿ ಇದ್ದರೆ ಏನ್ಕಲೀಬಹುದೋ?' ಎಂದೆ.

'ಇಡೀ ಅಧ್ಯಾತ್ಮವೇ ಅಡಗಿದೆ ಕಣಯ್ಯ; ತನ್ನಂತೆ ಪರರ ಬಗೆದೊಡೆ ಅನ್ನೋದು ಇಲ್ಲೇ ಕಾಣುವ ಟ್ರೂತು. ಅದೇನ್ಹಾಳೇ ಪೋಸ್ಟ್ ಮಾಡಿರಲಿ, ನೀನು ಅವನ ಪೋಸ್ಟ್‌ನ ಲೈಕ್ ಮಾಡಿದ್ರೆ ಅವನು ನಿನ್ನ ಪೋಸ್ಟ್‌ನ ಲೈಕ್ ಮಾಡ್ತಾನೆ. ಲೈಕೋ ರಕ್ಷತಿ

ಲೈಕಿತಃ. ಎಫ್‌ಬಿ ನಮಗೆ ಷೇರ್ ಮಾಡೋದನ್ನ ಹೇಳ್ಕೊಡತ್ತೆ. ಬೈಟೂ ಕಾಫೀಗೂ ಖರ್ಚು ಮಾಡದೆ ಯಾರದಾದರೂ ಫ್ರೆಂಡ್‌ಷಿಪ್ ಗಿಟ್ಟಿಸ್ಕೊಳಕ್ಕೆ 'ಸೀನು ಷೇರ್ಡ್ ಯುವರ್ ಪೋಸ್ಟ್' ಅನ್ನೋದು ಅಲ್ಲಿ ರಿಫ್ಲೆಕ್ಟ್ ಆದರೆ ಸಾಕು' ಎಂದ ಸೀನು.

ಸೀನುವಿನ ಸೆಲ್‌ಫೋನ್ ಪ್ಲಿಂಕ್ ಎಂದಿತು.

'ಲುಕ್ ಎಟ್ ಮೈ ಲೇಟೆಸ್ಟ್ ಫೋಟೋಸ್ ಆನ್ ಇಂಸ್ಟಾಗ್ರಾಮ್' ಎಂದಿದ್ದಳೊಬ್ಬಳು ಮೀಟೂ ಮೀ ತ್ರೀ ಮೀ ಫೋರ್ ಖ್ಯಾತಿ ನಟಿ.

'ಐ ಆಮ್ ವೆರಿ ಬ್ಯುಸಿ. ಈಫ್ ಯೂ ಡೋಂಟ್ ಮೈಂಡ್...' ಎನ್ನುತ್ತಾ ಸೀನು 'ಸೆಲ್-ಬೌಂಡ್' ಆದ.

'ಬಿಡೋ, ಆ ಫೋಟೋಗಳು ಅಲ್ಲೇ ಇರತ್ವೆ. ಆಮೇಲೆ ನೋಡಿದ್ರಾಯ್ತು' ಎಂದೆ. ಸೀನುವಿನಿಂದ ಯಾವುದೇ ಉತ್ತರ ಬರಲಿಲ್ಲ. ಬೆರಳುಗಳು ಹೈಕ್ಲಾಸ್ ಭಕ್ತ ರುದ್ರಾಕ್ಷಿಮಾಲೆಯ ಮೇಲೆ ಬೆರಳಾಡಿಸುವಂತೆ ಫೋನ್ ಮೇಲೆ ಆಡುತ್ತಿದ್ದವು.

ಸೀನುವಿನ ಗಮನ ಸೆಳೆಯಲೆಂದು ಅವನ ಮತ್ತು ಅವನ ಫೋನ್‌ನ ಮಧ್ಯೆ ಕೈಯಿರಿಸಹೋದೆ.


ಟ್ರೋಜಾನ್ ಹಾರ್ಸ್ ವೈರಸ್ ಅನ್ನು ಕಂಡ ಸಾಫ್ಟ್‌ವೇರ್ ಇಂಜಿನಿಯರ್‌ನಂತೆ ಬೆಚ್ಚಿಬಿದ್ದ ಸೀನು. "ಛೆ! ನನ್ನ ನಿನ್ನ ಮಧ್ಯೆ ಒಂದು ಫೈರ್‌ವಾಲ್ ಹಾಕ್ಕೋಬೇಕು. ಅನ್‌ವಾಂಟೆಡ್ ಪಾಪಪ್‌ಗಳ ತರಹ ಬರ್ತೀಯ ನೀನು. ಗೋ ಬಡ್ಡೀ... ವಾಮೂಷ್... ಲಾಗ್ ಆನ್ ಟು ಸಂ ಅದರ್ ಫ್ರೆಂಡ್...' ಎಂದನವ.

'ಹೋಗ್ತೀನಿ. ದೇರ್ ಆರ್ ಮೆನಿ ಮೋರ್ ವೆಬ್‌ಸೈಟ್ಸ್ ದಟ್ ಐ ಕಾನ್ ಲಾಗ್ ಇನ್‌ಟು' ಎನ್ನುತ್ತಾ ಷಾರ್ಟ್ ಸೈಟೆಡ್ ಸೀನುವಿನ ಸೈಟ್‌ನಿಂದ ಲಾಗೌಟ್ ಆದೆ.

■

## ಅಜ್ಜಿಯ ಫೇಸ್ ಬುಕ್ ಅಪ್‌ಡೇಟ್

ಅಮೆರಿಕಾದಲ್ಲಿರುವ ಮೊಮ್ಮಗ ರಾತ್ರಿ ಅಜ್ಜಿಯೊಂದಿಗೆ ಮಾತಾಡ್ತ, 'ಅಜ್ಜೀ ನೀನು ಮಾಡಿಕೊಡ್ತಿದ್ದ ಅವರೇಕಾಳು ರೊಟ್ಟಿನ ಬಹಳ ಮಿಸ್ ಮಾಡ್ಕೊತಾ ಇದೀನಿ ಅಜ್ಜಿ. ಅಲ್ಲಿಗೆ ಓಡಿ ಬಂದುಬಿಡಲಾ ಅಂತ ಒಂದೊಂದು ಸಲ ಅನ್ಸುತ್ತೆ' ಅಂದಿದ್ದ. ಮರುದಿನ ಅಜ್ಜಿ ಮೊಮ್ಮಗನ ಫೇಸ್‌ಬುಕ್ ಅಪ್‌ಡೇಟ್ ಮಾಡಿದ್ದಳು. 'ಅಯ್ಯೋ ಹೌದೇನೋ ಮುಂಡೇದೇ, ಅವರೇ ಕಾಳು ರೊಟ್ಟಿನ ನಿನ್ನ ಫೇಸ್ ಬುಕ್ ಪೇಜಲ್ಲಿ ಅಪ್ ಲೋಡ್ ಮಾಡಿದೀನಿ. ಎಷ್ಟು ಬೇಕೋ ಅಷ್ಟು ತಿನ್ನು' ಅಂತ ಮೆಸೇಜ್ ಹಾಕಿದ್ದಳು.





16ನೇ ಶತಮಾನದಲ್ಲಿ ಸೋಷಿಯಲ್ ಮೀಡಿಯ






ನಿಮ್ಮ ಮಗೂಗೆ ಎಕ್ಸ್ಟ್ರಾ ಹೆಬ್ಬೆರಳುಗಳಿವೆ
ಟೆಕ್ಸ್ಟ್ ಮಾಡೋಕೆ ಅನುಕೂಲ



# ಸೋಷಿಯಲ್ ಮೀಡಿಯಾ ರಸಕ್ಷಣಗಳು

**• ಬೇಲೂರು ರಾಮಮೂರ್ತಿ**

## ಸುಖದಿಂದ ಅಸುಖ

ಒಂದು ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಹೆಂಗಸು ದೀರ್ಘ ರಜೆ ಬೇಕೆಂದು ಮಾನಸಿಕ ಅಸ್ವಸ್ಥತೆಯನ್ನು ಕಾರಣವಾಗಿಸಿಕೊಂಡಿದ್ದಳು. ಅವಳಿಗೆ ರಜೆಯೂ ಮಂಜೂರು ಆಗಿ ಪ್ರತಿ ತಿಂಗಳೂ ವಿಮಾ ಕಂಪನಯಿಂದ ಅವಳಿಗೆ ಹಣ ಬರುತ್ತಿತ್ತು. ಎಲ್ಲವೂ ಸರಿಯಾಗಿತ್ತು ಎನ್ನುವಾಗಲೇ ಆ ಹೆಂಗಸು ಪ್ರವಾಸ ಹೋಗಿ ಸಮುದ್ರ ತೀರದಲ್ಲಿ ಆಟವಾಡುತ್ತಿದ್ದುದೂ, ಹುಟ್ಟಿದ ಹಬ್ಬ ಆಚರಿಸಿಕೊಳ್ಳುತ್ತಿರುವುದೂ, ಸ್ನೇಹಿತರೊಂದಿಗೆ ಮಾಲ್‌ಗಳಲ್ಲಿ ಸುತ್ತಾಡುತ್ತಿರುವ ಚಿತ್ರಗಳು ಫೇಸ್ ಬುಕ್, ಟ್ವಿಟರ್‌ಗಳಲ್ಲಿ ಹರಿದಾಡಿತು. ಕೆಲವೇ ದಿವಸಗಳಲ್ಲಿ ಇದು ವಿಮಾ ಕಂಪನಗೂ ತಿಳಿದು ಅವರಿಂದ ಆ ಹೆಂಗಸಿಗೆ ನಿನ್ನ ರಜೆಯನ್ನು ರದ್ದು ಮಾಡಲಾಗಿದೆ. ನಿನ್ನ ದೀರ್ಘರಜೆಯಲ್ಲಿ ಕೊಟ್ಟಿರುವ ಹಣವನ್ನು ಹಿಂದಿರುಗಿಸುವುದು ಎನ್ನುವ ನೋಟೀಸ್ ಬಂತು. ಹಿಂದೆಯೇ ಕಂಪನಿಯಿಂದ ನಿನ್ನನ್ನು ಕೆಲಸದಿಂದ ತೆಗೆದುಹಾಕಲಾಗಿದೆ ಎನ್ನುವ ವಾರ್ತೆಯೂ ಬಂತು. ಈ ಸೋಷಿಯಲ್ ಮೀಡಿಯಾದಿಂದ ನನ್ನ ಸುಖ ಅಸುಖವಾಗಿ ಬದಲಾಯಿತಲ್ಲ ಎಂದು ಹೆಂಗಸು ಪರಿತಪಿಸಿದಳು. ಸೋಷಿಯಲ್ ಮೀಡಿಯಾ ಆಗಲೀ, ಇನ್ನಿತರ ಆಧುನಿಕ ಯಂತ್ರೋಪಕರಣಗಳೇ ಆಗಲಿ ಅವುಗಳನ್ನು ನಮ್ಮ ಅವಶ್ಯಕತೆಗೆ ಮಾತ್ರ ಬಳಸಬೇಕೇ ಹೊರತು ಅವುಗಳಿಂದ ಪ್ರಭಾವಿತರಾಗಿ ನಮ್ಮ ಆಸೆ ದುರಾಸೆಗಳಿಗೆ ಅವುಗಳನ್ನು ಬಳಸಿಕೊಳ್ಳಬಾರದು ಎನ್ನುವ ಸಂದೇಶ ಈ ಸಂಗತಿಯಿಂದ ನಮಗೆ ತಿಳಿಯುತ್ತದೆ.

## ಸೋಷಿಯಲ್ ಮೀಡಿಯಾದಿಂದ ದೂರವಿದ್ದರೆ?

ಒಬ್ಬ ಮನುಷ್ಯ ನನ್ನಲ್ಲಿ ಕಂಪ್ಯೂಟರ್ ಇಲ್ಲ ಅದು ನನಗೆ ಬೇಕಾಗೂ ಇಲ್ಲ. ಇನ್ನು ಫೇಸ್ ಬುಕ್ ಟ್ವಿಟರ್ ಇವುಗಳಿಂದ ನಾನು ದೂರವೇ. ಏನಿದ್ದರೂ ನಾನು ಎಲ್ಲರೊಂದಿಗೂ ಮುಕ್ತ ಮಾತುಕತೆಯಿಂದ ವ್ಯವಹರಿಸುತ್ತೇನೆ ಎಂದು ಹೇಳಿಕೊಂಡು ಖುಷಿ ಖುಷಿಯಿಂದಿದ್ದ. ನಂತರದ ದಿನಗಳ ಅವನ ಅನುಭವಗಳನ್ನು ಅವನ ಬಾಯಿಂದಲೇ ಕೇಳಿ.

ನಾನು ಪ್ರತಿದಿನ ನಮ್ಮ ಮನೆಯ ಬೀದಿಯ ಕೊನೆಯವರೆವಿಗೂ ಹೋಗುತ್ತೇನೆ. ಅಲ್ಲಿ ಕಂಡವರಿಗೆ, ಅವರು ಹೊಸಬರಿರಲಿ, ಹಳೆಯ ವ್ಯಕ್ತಿಗಳಿರಲಿ, ನಾನು ಬೆಳಗ್ಗೆ ಎಷ್ಟು ಹೊತ್ತಿಗೆ ಎದ್ದೆ, ಏನು ತಿಂಡಿ ತಿಂದೆ, ನನಗೆ ಇವತ್ತು ಏನನಿಸಿತು ಎನ್ನುವುದನ್ನು ಹೇಳುತ್ತೇನೆ. ಪ್ರತಿ ದಿನ ಬೇರೆ ಬೇರೆ ವಿಚಾರಗಳನ್ನು ಹೇಳುತ್ತೇನೆ. ಉದಾಹರಣೆಗೆ ನಾನು ನೋಡಿದ ಸಿನಿಮಾ, ನಾನು ನನ್ನ ಹೆಂಡತಿ ಮಕ್ಕಳ ಜೊತೆ ಯಾವ ಸಿನಿಮಾಕ್ಕೆ ಹೋಗಿದ್ದೆ, ನನ್ನ ಹೆಂಡತಿ ಯಾವ ಹೊಸ ಸೀರೆ ಕೊಂಡಳು, ನನ್ನ ಮಕ್ಕಳು

ಏನೇನು ಮಾಡಿದರು, ನೆನ್ನೆ ನನ್ನ ಮನೆಯಲ್ಲಿ ಯಾವ ಹೊಸ ರುಚಿ ಮಾಡಿದ್ದೆವು, ನಮ್ಮ ಮನೆಯ ನಾಯಿ ಎಷ್ಟು ಮರಿ ಹಾಕಿದೆ ಮುಂತಾದುವುಗಳನ್ನು ನಾನು ಎಲ್ಲರೊಂದಿಗೂ ಹೇಳಿಕೊಳ್ಳುತ್ತಿದ್ದೇನೆ. ನನ್ನ ಮಾತುಗಳಲ್ಲಿ ಅವರಿಗೆ ಆಸಕ್ತಿ ಇದೆಯೋ ಇಲ್ಲವೋ ಎನ್ನುವುದು ನನಗೆ ಮುಖ್ಯವೇ ಅಲ್ಲ. ಅದರಿಂದಾಗಿ ಕೆಲವರು ನನ್ನ ಮಾತುಗಳನ್ನು ಆಸಕ್ತಿಯಿಂದ ಕೇಳಿಸಿಕೊಂಡರೆ ಇನ್ನು ಕೆಲವರು ಮುಖ ಸಿಂಡರಿಸಿ ಹೊರಟುಹೋಗುತ್ತಾರೆ. ಕೆಲವರು ನನ್ನ ಕಡೆ ವಿಚಿತ್ರ ರೀತಿಯಿಂದ ನೋಡುತ್ತಾರೆ. ಆದರೇನು ನಾನು ಹಾಗೆ ಮಾತಾಡುವುದನ್ನು ಬಿಟ್ಟಿಲ್ಲ.

ಇದರ ಪರಿಣಾಮ ಹೀಗಿದೆ. ನಾನು ಹೋದ ಕಡೆ ನನ್ನನ್ನು ನಾಲ್ಕು ಜನ ಹಿಂಬಾಲಿಸುತ್ತಿದ್ದಾರೆ. ನಾಲ್ವರು ಯಾರೆಂದರೆ ಇಬ್ಬರು ಪೋಲೀಸರು, ಒಬ್ಬ ಸಾಮಾಜಿಕ ಕಾರ್ಯಕರ್ತ, ಮತ್ತೊಬ್ಬ ಮಾನಸಿಕ ವೈದ್ಯ.

*(ಸಂಗ್ರಹ : ಇಂಟರ್‌ನೆಟ್‌ನಿಂದ)*

## ಸೋಷಿಯಲ್ ಮೀಡಿಯ – ಒಂದು ವಿವರಣೆ

**ಟ್ವಿಟ್ಟರ್:**
**ನಾನು ಇಡ್ಲಿ ತಿನ್ನುತ್ತಿದ್ದೇನೆ.**

**ಫೇಸ್ ಬುಕ್:**
**ನನಗೆ ಇಡ್ಲಿ ಇಷ್ಟ.**

**ಪಿನ್‌ರೆಸ್ಟ್:**
**ಇದು ಮೈಸೂರಿನ 'ಮಲ್ಲಿಗೆ ಇಡ್ಲಿ'**

**ಇನ್ಸ್ಟಗ್ರಾಮ್:**
**ಇಡ್ಲಿಯ ಒಂದು ಹಳೆಯ ಚಿತ್ರ.**

**ಯುಟ್ಯೂಬ್:**
**ನೋಡಿ, ನಾನು ಇಡ್ಲಿ ತಿನ್ನುತ್ತಿದ್ದೇನೆ.**

**RAMAIAH**
**Indic Specialty Ayurveda**

**RESTORATION HOSPITAL**

## Ramaiah Ayurveda

- General Medicine
- Pain Clinic
- Dermatology
- Ophthalmology
- Gynaecology & Obstetrics
- Paediatrics
- Geriatrics
- Preventive Medicine (Wellness, Well - Being)
- Yoga
- Ayurvedic Para-Surgical Procedures

Proud to Announce
**NABH Accrediation**



Under the Leadership of
**Prof. Dr. G.G. Gangadharan**

## World Renowned Doctors



First Franchise
Bannerghatta




First Joint Venture
Penang, Malaysia




First Branch
Yelahanka New Town

24/7 Emergency Healthcare
Attached to Memorial Hospital
Spacious in Patient Facility

Free Telephonic Consultation
**080 22183456, 80 99 95 95 95**

New BEL Road, M S Ramaiah Nagar, Bengaluru - 560 054, www.msricaim.com

# ಭಾರತದ ಮೊಟ್ಟಮೊದಲ
# ಸಾರ್ವಜನಿಕ ಔಷಧ ಪ್ರಯೋಗಾಲಯ ಸಂಸ್ಥೆ



















- ನೀವು ಕುಡಿಯುವ ನೀರು ಶುದ್ಧವೇ?
- ನಿಮ್ಮ ಮಕ್ಕಳ ತಿನಿಸುಗಳಲ್ಲಿ ಹಾನಿಕಾರಕ ಅಂಶಗಳಿವೆಯೇ?
- ನಿಮ್ಮ ಮನೆಯ ಅಂಗಳದಲ್ಲಿ ಅಥವಾ ಹೊಲದ ಮಣ್ಣಿನಲ್ಲಿ ವಿಷಕಾರಿ ಅಂಶವಿದೆಯೇ?
- ನೀವು ಸೇವಿಸುವ ಗಿಡಮೂಲಿಕೆ ಔಷಧಿಗಳಲ್ಲಿ ಹಾನಿಕಾರಕ ಅಂಶವಿದೆಯೇ?
- ಹಾಳಾದ ಅಥವಾ ಕಲಬೆರಕೆ ತಿನಿಸುಗಳ ಭಯವೇ?
- ಮೂತ್ರ, ರಕ್ತದಲ್ಲಿ ವಿಷಕಾರಿ ಅಥವಾ ಖನಿಜಾಂಶಗಳ ಪರೀಕ್ಷೆ ಮಾಡಿಸಬೇಕೇ?

ಈ ಎಲ್ಲಾ ಸಂದೇಹಗಳಿಗೆ ಶೀಘ್ರದಲ್ಲಿ ಉತ್ತರ ಪಡೆಯಲು ಹಾಗೂ ನೀವು ಆರೋಗ್ಯಕರ ಪದಾರ್ಥಗಳನ್ನು ಸೇವಿಸುವಂತಾಗಲು ನೀರು, ಆಹಾರ, ಮಣ್ಣು ಹಾಗೂ ಔಷಧಿಗಳನ್ನು ಪರೀಕ್ಷೆ ಮಾಡಿಸಿ.

RAMAIAH

## RAMAIAH ADVANCED TESTING LAB
## RAMAIAH ADVANCED TRAINING CENTRE

**CERTIFICATE TRAINING PROGRAMS * PROJECTS * P.G. DIPLOMA ON MODERN METHODS OF ANALYSIS FOR FOOD / DRUG / ENVIRONMENT FOR GRADUATES & POST-GRADUATES IN SCIENCE, ENGG, PHARMACY, BIO-CHEMISTRY, BIO-TECHNOLOGY**

Opp. Ramaiah Hospital, 80 Ft Road, New BEL Road,Bengaluru – 560 054
Call 9844163329; 080 4091 8017,
E – mail: msrdtl@gmail.com or just drop in!

# ಆಹಾ, ಬದುಕು ಎಷ್ಟು ವರ್ಣರಂಜಿತ!

• ಸಹನಾ ಪ್ರಸಾದ್

ನನಗೇನಿಷ್ಟ ಅಂತ ಯಾರಾದರೂ ಕೇಳಿದರೆ (ಯಾರೂ ಕೇಳಿಲ್ಲ, ಅದರ ವಿಷಯ ಬಿಡಿ) ನಾ ಹೇಳುವುದು ಒಂದೇ ಮಾತು, ಮಾತು ಅಂತ. ಅದೇ, ಮಾತಾಡುವುದು, ಮಾತಾಡುತ್ತಲೇ ಇರುವುದು. ಬಾಯಿ ತೆಗೆದರೆ ಮುಚ್ಚುವುದು ಬಲು ಕಷ್ಟ. ಅದರ ಜತೆ ಕುತೂಹಲ, ಯಾರೇನು ಮಾಡುತ್ತಾ ಇದಾರೆ, ಯಾರ ಮನೆಯಲ್ಲಿ ಏನು ನಡೀತಾ ಇದೆ ಎಂದೆಲ್ಲ. ಅದರಿಂದಲೇ ಇರಬೇಕು, ಈ ಸೊಶಿಯಲ್ ಮೀಡಿಯ ಅಂತ ಬಂದ ಮೇಲೆ ನನಗೆ ಬಲು ಖುಶಿ. ಮೊದಲೆಲ್ಲ ಹರಟೆ ಕೊಚ್ಚಲು ಜನ ಹುಡುಕಬೇಕಾಗಿತ್ತು. ಈಗ ಮಾತಾಡಲು, ಗಾಸಿಪ್ ಮಾಡಲು ಜನದ ಕೊರತೆಯೇ ಇಲ್ಲ. ಮೂರು ಹೊತ್ತು ಅವರಿವರ ಜತೆ ಮಾತುಕತೆ, ಅವಳ ಒಡವೆ ನೋಡು, ಇವಳ ಮನೆ ನೋಡು, ಅವನ ಕಾರು ನೋಡು, ಇವರ ಮನೆ ಜಗಳ ಕೇಳು.... ಆಹಾ, ಬದುಕು ಎಷ್ಟು ವರ್ಣರಂಜಿತ!

ಭಾನುವಾರವಾದ್ದರಿಂದ ಮನೆಯಲ್ಲಿ ಎಲ್ಲರೂ ಇದ್ದರು. ಮಗ ಒಂದು ಕಡೆ ಚ್ಯಾಟಿಂಗ್, ಮಗಳು ಹೊಸ ಹೊಸ ವೀಡಿಯೊ ನೋಡಿ ಕೂದಲ ಸ್ಟೈಲ್ ಮಾಡಿಕೊಳ್ಳುವುದರಲ್ಲಿ ಬ್ಯುಸಿ, ಅತ್ತೆ ಅವರ ವಾಟ್ಸಾಪ್ ಗ್ರೂಪಿನಲ್ಲಿ ಹರಟೆ (ಹುಶ್, ಅವರ ಗುಂಪಿನಲ್ಲಿ ಬರಿ ದೇವರನಾಮಗಳು, ಉಪವಾಸ ವ್ರತಗಳ ಬಗ್ಗೆ ಜಾಸ್ತಿ ಗುಸುಗುಸು!) ಮಾವ ಟೀವಿಯಲ್ಲಿ ಬರುವ ವಿವಿಧ ಚಾನಲ್ಗಳಲ್ಲಿ ಪದೇ ಪದೇ ಪ್ರಸಾರವಾಗುತ್ತಿರುವ ಹಳೆ ಸುದ್ದಿ, ಹಳಸಲು ರಾಜಕೀಯ, ಮಧ್ಯೆ ಮಧ್ಯೆ ಬರುತ್ತಿರುವ ನೋವು ನಿವಾರಕ ತೈಲದ ಜಾಹೀರಾತು ಇವುಗಳಲ್ಲಿ ಕಳೆದುಹೋಗಿದ್ದರು. ಬಿಸಿ ಬಿಸಿ ಉಪ್ಪಿಟ್ಟು ಹೊಟ್ಟೆಗೆ ಹೋಗಿದ್ದು ಯಾರಿಗೂ ಗೊತ್ತಾಗಲೇ ಇಲ್ಲ.


ಸುಮಾರು ಹೊತ್ತು ವಾಟ್ಸಾಪ್ಪಿನಲ್ಲಿ ಹರಟೆ ಹೊಡೆದು ಅಡುಗೆ ಮನೆಯತ್ತ ನಡೆದೆ, ''ನನಗೆ ಬೇಗ ಊಟ ರೆಡಿ ಮಾಡು, ನಾ ಪ್ರೈಮರಿ ಶಾಲೆ ಸಹಪಾಠಿಗಳೊಡನೆ ದೋಸೆ ಮೇಳಕ್ಕೆ ಹೊರಟೆ'' ಗಂಡನ ದನಿ ಕೇಳಿಸಿದ ಮೇಲೆ. ''ದೋಸೆ ಮೇಳಕ್ಕೆ ಹೊರಟ ಮೇಲೆ ಊಟ ಯಾಕೆ? ಅಲ್ಲೆ ತಿನ್ನಿ, ನಾ ಸ್ವಿಗ್ಗಿಯಲ್ಲಿ ಊಟ ತರಿಸಿ ಬಿಡುವೆ.'' ಅತ್ತೆಯವರ ದನಿ ಕೇಳಿತು ''ಅಯ್ಯೊ, ಬೇಡ ಕಣೆ, ಮೊನ್ನೆ ಜಲಜಳ ಮನೆಯಲ್ಲಿ ತರಿಸಿದ್ದಳು. ವಿಪರೀತ ಖಾರ, ತಿನ್ನಲು ಆಗಲೇ ಇಲ್ಲ. ಹಳೆ, ಕೊಳೆತ ತರಕಾರಿ ಹಾಕಿ ಖಾರ ಹುಯ್ಯುತಾರೆ, ನೀನೆ ಒಂದು ಅನ್ನಸಾರು ಮಾಡು''. ಸ್ವಿಗ್ಗಿಯಲ್ಲಿ ಜಲಜ ಆಂಟಿ ತರಿಸಿದ್ದ ಹೋಟೆಲು ಮಾತ್ರವೆ ಇರುವುದಾ ಎಂದು ಬೈದುಕೊಂಡೆ.

ಅಡುಗೆ ಮಾಡಿ ಸುಸ್ತಾಗಿತ್ತು. ಅನ್ನ, ಸಾರು, ಕೋಸಿನ ಪಲ್ಯ ಅಷ್ಟೆ ಅದು ಮಾಡಲು ಏನು ಅಡಚಡಣೆಗಳು ಅಂತೀರಿ,'' ಬೀಪ್, ಬೀಪ್'' ಎನ್ನುವ ವಾಟ್ಸಾಪ್ ಮೆಸ್ಸೇಜುಗಳು, ಮುಖಪುಟದ ನೋಟಿಫಿಕೇಷನ್ಗಳು, ಒಂದೇ, ಎರಡೇ. ಛೆ, ಅಡುಗೆ ಮಾಡಕ್ಕೂ ಬಿಡಲ್ಲವಲ್ಲ, ಉಪ್ಪು ಹಾಕಿದೀನ, ಇಲ್ಲವಾ, ಕೊತ್ತಂಬರಿ ಸೊಪ್ಪು ತೊಳೆದ್ದಿದ್ವಾ, ಯೋಚನೆ


ಮಾಡುವಷ್ಟು ತಾಳ್ಮೆ ಇರದೆ ಸುಮ್ಮನಾದೆ. ಸೋಫಾದ ಮೇಲೆ ಆಸೀನಳಾದ ತಕ್ಷಣ ಗೆಳತಿಯರ ಗುಂಪಿನಲ್ಲಿ ಬಿಸಿ ಬಿಸಿ ಚರ್ಚೆ ಶುರುವಾಗಿತ್ತು. ಹೊಸ ಪಿಕ್ಚರ್, ಅದರಲ್ಲಿ ನಾಯಕಿ ನೀಲಿ ಸೀರೆ ಬದಲು ಹಸಿರು ಉಟ್ಟಿದ್ದರೆ ಚೆನ್ನಾಗಿತ್ತು, ಅಡುಗೆ ಮನೆಯಲ್ಲಿ ಮೈಕ್ರೋವೇವ್ ಆದರೂ ಇರಬೇಕಿತ್ತು, ರೂಮಿನಲ್ಲಿ ವಾಸ್ ಸರಿ ಇರಲಿಲ್ಲ...

ಅಷ್ಟರಲ್ಲಿ ಮಾವ ಅತ್ತೆ ಸೇರಿ ಏನೋ ನೋಡುತ್ತಿದ್ದರು. ಅವರ ಪಿಸಿಪಿಸಿ ಕೇಳಿ ಕುತೂಹಲ ಕೆರಳಿ ಅಲ್ಲಿಗೆ ನಡೆದೆ. ಅತ್ತೆಯ ತಂಗಿ ಯಾವುದೊ ಸಿನಿಮಾ ಹಾಡಿಗೆ ಆಕ್ಟ್ ಮಾಡುತ್ತಿರುವ ವೀಡಿಯೊ! ಅದನ್ನು ಸೆರೆ ಹಿಡಿದು ಎಡಿಟ್ ಮಾಡಿದ್ದು ಅವರ ಸೊಸೆ! ಹಾವು ಮುಂಗುಸಿ ತರಹ ಕಿತ್ತಾಡುತ್ತಿದ್ದವರು ಇವರೇನಾ ಎಂದು ಮೂಗಿನ ಮೇಲೆ ಬೆರಳಿಟ್ಟೆ. ''ನೀ ಇನ್ನೂ ಚೆನ್ನಾಗಿ ನಟಿಸುತ್ತೀಯ ಕಣೆ, ಅವಳಕ್ಕ ನೀನು'' ಎಂದು ಮಾವ ಮುದ್ದುಗರೆಯುತ್ತಿರುವುದು, ಅತ್ತೆ ನಾಚಿಕೆಯಿಂದ ತಲೆ ಆಡಿಸುವುದು ನೋಡಿ ಅಲ್ಲಿಂದ ಎಸ್ಕೇಪ್ ಆದೆ. ಮೊನ್ನೆ ಇಬ್ಬರೂ ಕೂತು ನೆಟ್ ಫ್ಲೆಕ್ಸ್ ಅಲ್ಲಿ ರೊಮಾಂಟಿಕ್ ಫಿಲಮ್ ನೋಡಿದ್ದು ನೆನಪಿಗೆ ಬಂತು. ಅದರಲ್ಲೂ ಇಳಿ ವಯಸ್ಸಿನ ಪ್ರೇಮದ ಕತೆಯೆ!

''ಅಯ್ಯೊ, ಇದೇನಿದು, ಸಾರು ಈ ರೀತಿ ಇದೆ, ಉಪ್ಪಿಲ್ಲ, ಹುಳಿ ಖಾರ ಇಲ್ಲ'' ಮನೆಯೊಡೆಯನ ಕೋಪದ ದನಿ ಕೇಳಿ ಬೇಸರದಿಂದ ಎದ್ದೆ. ಇನ್ನು ನನ್ನ ಮೊಬೈಲ್ ಬಗ್ಗೆ, ಸೊಶಿಯಲ್ ಮೀಡಿಯ ಬಗ್ಗೆ ಭಾಷಣ ಶುರು ಆಗುತ್ತಲ್ಲ ಎಂದು ಊಟದ ಮನೆಗೆ ಹೋದಾಗ ಶಾಕ್ ಕಾದಿತ್ತು. ಯಜಮಾನರು ಯೂಟ್ಯೂಬ್ ನೋಡುತ್ತಾ ಅನ್ನಕ್ಕೆ ಸಾರು ಬದಲು ನೀರು ಸುರಿದುಕೊಂಡಿದ್ದರು!




ಈಗ ನೀವಿಬ್ಬರು
ಗಂಡಹೆಂಡತಿ.....
ನಿಮ್ಮ ಫೇಸ್‌ಬುಕ್ ಸ್ಟೇಟಸ್
ಅಪ್ಡೇಟ್ ಮಾಡಿಕೊಳ್ಳಿ.


ಹಲೊ!
ನನ್ನ ಟ್ವಿಟ್ಟರ್ ಸಂಪರ್ಕ
ಕಡಿದಿದೆ.
ಬೆಳಿಗ್ಗೆ ಏನು ತಿಂಡಿ ತಿಂದಿರಿ
ಎಂದು ಹೇಳುವಿರಾ?
geek and poke


You
Tube

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

- ✓ ಫೇಸ್‌ಬುಕ್‌ನಲ್ಲಿ ನನ್ನ ಹೆಸರನ್ನು 'ನೊಬಡಿ' ಎಂದು ಬದಲಾಯಿಸಿಕೊಳ್ಳುತ್ತೇನೆ. ಯಾರಾದರೂ ಅಸಂಬದ್ಧ ಸಂದೇಶ ಹಾಕಿದ್ದರೆ ಆಗ ನಾನು ಅದನ್ನು ಲೈಕ್ ಮಾಡುವೆ. ಆಗ ನನ್ನ ಉತ್ತರ ಹೀಗಿರುತ್ತದೆ: 'ನೊಬಡಿ ಲೈಕ್ಸ್ ದಿಸ್'.
- ✓ ನಾನು ಸತತವಾಗಿ ಎರಡು ದಿನ ಫೇಸ್‌ಬುಕ್‌ನಲ್ಲಿ ಕಾಣಿಸಿಕೊಳ್ಳದಿದ್ದರೆ ಪೊಲೀಸರನ್ನು ಸಂಪರ್ಕಿಸಿ, ಯಾರೋ ನನ್ನನ್ನು ಕಿಡ್ನಾಪ್ ಮಾಡಿರುತ್ತಾರೆ.
- ✓ ಐ ಕೆನಾಟ್ ಕಂಟ್ರೋಲ್ ಹು ಫಾಲೋಸ್ ಮಿ ಬಟ್ ಐ ಕೆನ್ ಕಂಟ್ರೋಲ್ ಹು ಐ ಫಾಲೊ.
- ✓ ಕೂಲಿಂಗ್ ಗ್ಲಾಸ್ ಫೇಸ್‌ಬುಕ್‌ನಂತೆ. ನೀವು ಯಾರನ್ನ ಬೇಕಾದರೂ ದುರುಗುಟ್ಟಿ ನೋಡಬಹುದು. ಗೊತ್ತಾಗುವುದಿಲ್ಲ.
- ✓ ಏನು! ಇಂಟರ್‌ನೆಟ್, ಫೇಸ್‌ಬುಕ್, ವಾಟ್ಸಪ್ ಇಲ್ಲದೆ ಬದುಕಲು ಸಾಧ್ಯವೆ? ಲಿಂಕ್ ಕಳಿಸಿ ಪ್ಲೀಸ್.
- ✓ ಸಾರಿ, ಐ ರೋಟ್ ಯು ಸಚ್ ಎ ಲಾಂಗ್ ಪೋಸ್ಟ್. ಐ ಡಿಡ್ ನಾಟ್ ಹ್ಯಾವ್ ಟೈಂ ಟು ರೈಟ್ ಎ ಶಾರ್ಟ್ ಒನ್.
- ✓ ಫೇಸ್‌ಬುಕ್‌ನಲ್ಲಿ ನೀನು ಬರೆದದ್ದು ಓದಿದೆ. ನಿನಗೆ ಡಿಕ್ಷನರಿ ಅಗತ್ಯ ಇದೆ ಎಂದು ನನಗೆ ಮನವರಿಕೆಯಾಯಿತು.
- ✓ ಸೆಲ್ಫೀಸ್ ಆರ್ ಇನ್‌ಜೂರಿಯಸ್ ಟು ಹೆಲ್ತ್.
- ✓ ಕೆಲವರಿಗೆ ನಿದ್ದೆ ಬರದು ಏಕೆಂದರೆ ಅವರಿಗೆ ಇನ್‌ಸ್ಪೋಮ್ನಿಯ. ಇನ್ನ ಕೆಲವರಿಗೆ ನಿದ್ದೆ ಬರದು ಏಕೆಂದರೆ ಅವರ ಬಳಿ ಇಂಟರ್‌ನೆಟ್ ಇದೆ.
- ✓ ಟ್ವಿಟ್ಟರ್ ಈಸ್ ಎ ಗ್ರೇಟ್ ಪ್ಲೇಸ್ ಟು ಟೆಲ್ ದಿ ವರ್ಲ್ಡ್ ವಾಟ್ ಯು ಆರ್ ಥಿಂಕಿಂಗ್ ಬಿಫೋರ್ ಯು ಹ್ಯಾವ್ ಹ್ಯಾಡ್ ಎ ಛಾನ್ಸ್ ಟು ಥಿಂಕ್ ಅಬೌಟ್ ಇಟ್!
- ✓ ಬೋರ್ ಆಯಿತು ಎಂದು ಲಾಗ್ ಆಫ್ ಮಾಡುವೆ. ಐದು ನಿಮಿಷಗಳ ನಂತರ ಮತ್ತೆ ಲಾಗ್ ಆನ್ ಆಗುವೆ. ಏಕೆಂದರೆ ಬೋರ್ ಆಗಿರುತ್ತದೆ.
- ✓ ಯು ಆರ್ ವಾಟ್ ಯು ಷೇರ್.
- ✓ ಲಿಂಕ್ಡ್ ಇನ್ ಈಸ್ ಫಾರ್ ಪೀಪಲ್ ಯು ನೊ; ಫೇಸ್ ಬುಕ್ ಈಸ್ ಫಾರ್ ಪೀಪಲ್ ಯು ಯೂಸ್ಡ್ ಟು ನೊ. ಟ್ವಿಟ್ಟರ್ ಈಸ್ ಫಾರ್ ಪೀಪಲ್ ಯು ವಾಂಟ್ ಟು ನೊ.
- ✓ ನೆನಪಿದೆಯೆ? ಹಿಂದೆಲ್ಲಾ ದಿನಚರಿ ಬರೆಯುವ ಹವ್ಯಾಸವಿದ್ದು ಅದನ್ನು ಬೇರೆಯವರು ಓದಿದರೆ ಕೋಪ ಬರುತ್ತಿತ್ತು. ಈಗ ಎಲ್ಲವನ್ನೂ ಆನ್‌ಲೈನ್‌ನಲ್ಲಿ ಪ್ರಕಟಿಸುತ್ತಾರೆ. ಜನ ಅದನ್ನು ಓದದಿದ್ದರೆ ಕೋಪ ಮಾಡಿಕೊಳ್ಳುತ್ತಾರೆ.

# ಟೆಕ್ಸ್ಟು ಬೆಳ್ಳಿ, ಎಮೋಜಿ ಬಂಗಾರ

**• ನಳಿನಿ ಸೂರ್ಯಪ್ರಕಾಶ್**

ನಮ್ಮಜ್ಜಿ ಹೇಳ್ತಿದ್ದರು. ಅವರ ಕಾಲದಲ್ಲಿ ಮದುವೇಗೆ ಮುಂಚೆ ಹುಡುಗ–ಹುಡುಗಿ ಒಬ್ರನ್ನೊಬ್ರು ನೋಡೇ ಇರ್ತಿಲ್ಲಿಲ್ಲವಂತೆ! ಧಾರೆ ಸಮಯದಲ್ಲಿ ಅಂತರಪಟ ಸರಿದ ಮೇಲೇನೇ ಒಬ್ರನ್ನೊಬ್ರು ನೋಡ್ತಿದ್ರಂತೆ! ಈಗಲೂ ಒಂದು ರೀತಿ ಹಾಗೇ ಆಗಿದೆ ಅನ್ನಿ. ಚರಿತ್ರೆ ಮರುಕಳಿಸುತ್ತೆ ಅಂತಾರಲ್ಲ, ಹಾಗೆ. ಒಬ್ಬರನ್ನೊಬ್ರು ಮುಖಾಮುಖಿ, ಅಂದ್ರೆ ಫೇಸ್ ಟು ಫೇಸ್ ಬದಲಾಗಿ ಫೇಸ್‌ಬುಕ್ ಟು ಫೇಸ್‌ಬುಕ್ ಆದ್ರೆ ಸಾಕು. ಫೇಸ್‌ಬುಕ್ಕಿನಲ್ಲೇ ಮದುವೆಯಾಗಿ, ಟ್ವಿಟರ್‌ನಲ್ಲಿ (ಹಕ್ಕಿಗಳ ಹಾಗೆ) 'ಟ್ವೀಟ್' ಮಾಡ್ಕೊಳ್ತಾ, ಇನ್‌ಸ್ಟಾಗ್ರಾಂನಲ್ಲಿ ಇನ್‌ಸ್ಟೆಂಟ್ ಆಗಿ ಮಕ್ಕಳಾಗೋ ಕಾಲ ಬಂದ್ರೂ ಬಂದೀತು!

ನನ್ನ ಯೋಚನೆಗೆ ನಾನೇ ಕಿಸಕ್ಕನೆ ನಕ್ಕೆ! ನನ್ನ ಯೋಚನಾಲಹರಿ ಎದುರಿಗಿದ್ದ ಟೀವಿಗೆ 'ಟೆಲಿಪತಿ'ಯಾಯಿತೇನೋ! ಯಾವುದೋ ಒಂದು ಜಾಹೀರಾತು. ಅದ್ರಲ್ಲಿ ಮನೆಯಾಕೆ ಕೆಲಸದಾಕೆಯನ್ನು ಕೇಳ್ತಾಳೆ, "ನಿನ್ನೆ ಯಾಕೆ ಬರ್ಲಿಲ್ಲ" ಅಂತ. ಅದಕ್ಕೆ ಅವಳು "ಫೇಸ್‌ಬುಕ್‌ನಲ್ಲಿ ಅಪ್‌ಡೇಟ್ ಮಾಡಿದ್ನಲ್ಲಮ್ಮಾ... (ನಾಚ್ಕೊಳ್ತಾ) ಸಾಹೇಬ್ರು ಕೂಡ ಲೈಕ್ ಮಾಡಿ, 'ಮಿಸ್ ಯೂ' ಅಂತ ಕಳ್ಸಿದ್ರೂ" ಅಂತ! ಈ ಕೆಲಸದಾಕೆಯೇನಾದ್ರೂ "ಇವತ್ತು ಬರಲ್ಲ. ಲೂಸ್ ಮೋಷನ್ ಆಗ್ತಿದೆ" ಅಂತ ಅಪ್‌ಡೇಟ್ ಮಾಡಿದ್ರೆ, ಆ ಸಾಹೇಬ, 'ಅದನ್ನೂ 'ಲೈಕ್' ಮಾಡಿ, 'ಮಿಸ್ ಯೂ' ಅಂತ ಕಳಿಸ್ತಾನಾ...!"?

ಸಧ್ಯ! ನಮ್ಮನೆಯ ಕಾಮಾಕ್ಷಿ (ಅಂದ್ರೆ, ಹಿಂದಿಯ 'ಕಾಮ್' ಅರ್ಥಾತ್ 'ಕೆಲಸ', ಮನೆಕೆಲಸದವಳನ್ನು 'ಕಾಮಾಕ್ಷಿ' ಅಂತೀವಿ!) ಟೀವಿ ಕಾಮಾಕ್ಷಿಯಷ್ಟೇನು ಸ್ಮಾರ್ಟ್ ಅಲ್ಲಪ್ಪ! ಫೇಸ್‌ಬುಕ್ ಬಿಡಿ, ಸ್ಮಾರ್ಟ್ ಫೋನೂ ಇಟ್ಕೊಂಡಿಲ್ಲ. ನನ್ನ ಅದೃಷ್ಟ! ಬಟನ್ ಫೋನನ್ನೇ ಅದುಮ್ತಾ ಮಾತಾಡ್ತಿರ್ತಾಳೆ. ಇಲ್ದಿದ್ರೇ, ಇವಳು ಸುಲಭವಾಗಿ, ಸ್ಮಾರ್ಟ್‌ಫೋನ್‌ನಲ್ಲಿ 'ನೋ ಕಮಿಂಗ್' ಅಂತ ವಾಟ್ಸ್ಯಾಪ್ ಮಾಡೋದ್ರೂ, ವಾಟ್ಸ್ಯಾಪ್ ನೋಡೋ ಅಭ್ಯಾಸವಿಲ್ಲದ ನಾನು, ಇವಳ ದಾರಿ ಕಾದೂ ಕಾದೂ, ಕೊನೆಗೆ ಒಂದು ಗಾಡಿ ಪಾತ್ರೆಗಳನ್ನು ಇವಳನ್ನು ಶಪಿಸಿಕೊಳ್ತಾ ತೊಳೆಯೋದೂ ಎಲ್ಲಾ ತಪ್ತು! ಏನಿದ್ರೂ ಮುಖಾಮುಖಿ, ಅಂದ್ರೆ ಫೇಸ್ ಟು ಫೇಸ್ ಹೇಳಿಬಿಡ್ತಾಳೆ. ನನ್ನ ಪುಣ್ಯ! ಹಾಗಾಗಿ ಕ್ಯಾಲೆಂಡರಿನಲ್ಲಿ ನಮ್ಮ ಕಾಮಾಕ್ಷಿಯ ಹಾಜರಾತಿ ಸ್ಟೇಟಸ್‌ನ ನಾನೇ ಪೆನ್ನಿನಲ್ಲಿ ಅಪ್‌ಡೇಟ್ ಮಾಡ್ತಿರ್ತೀನಿ. ಇವಳು ಬರದಿದ್ದ ತಾರೀಖಿನ ಬಳಿ, 'ಕಾಚ' ಅಂತ, ಅಂದ್ರೆ, 'ಕಾಮಾಕ್ಷಿ ಚಕ್ಕರ್' ಎಂಬ ಶಾರ್ಟ್‌ಫಾರಮ್ಮು!

ನಮ್ಮ ಗಾದೆ ಮಾತೊಂದು ನೆನಪಾಗತ್ತೆ. "ಮಾತು ಬೆಳ್ಳಿ, ಮೌನ ಬಂಗಾರ" ಅಂತ. ಈಗಿನ ವಾಟ್ಸ್ಯಾಪ್, ಫೇಸ್‌ಬುಕ್, ಟ್ವಿಟರ್ರು ಇತ್ಯಾದಿಗಳಲ್ಲಿ ನಡೆಯೋ ಇಷ್ಟೊಂದು 'ಮಾತುಕತೆ'ಗಳಿಗೆ, ಈ ಗಾದೆಯನ್ನ ಹೇಗೆ ಅನ್ವಯಿಸೋದು ಅಂತ. "ಮಾತು ಬೆಳ್ಳಿ, ಮೌನ ಬಂಗಾರ"ದ ಬದಲಿಗೆ, "ಟೆಕ್ಸ್ಟು ಬೆಳ್ಳಿ, ಎಮೋಜಿ ಬಂಗಾರ" ಅಂತ ಬದಲಾಯಿಸಬಹುದೇನೋ! ವಾಟ್ಸ್ಯಾಪ್ ಹೆಚ್ಚು ಬಳಸದ ನಾನು, ಫೇಸ್‌ಬುಕ್, ಮಣ್ಣು–ಮಸಿಗಳಿಂದಲೂ ಮತ್ತಷ್ಟು ದೂರ. ಆ ಸ್ಟೇಟಸ್ಸು, ಅಪ್‌ಡೇಟು, ಇವುಗಳ

ರಗಳೆಯಿಂದ ದೂರವಿದ್ದು ನೆಮ್ಮದಿಯಿಂದಿದ್ದೀನಿ. ನನ್ನ ಪರ್ಸನಲ್ ಇ–ಮೇಲೊಂದನ್ನ ಮೇಲಿಂದ ಮೇಲೆ ಉಪಯೋಗಿಸ್ತೀನಿ ಅಷ್ಟೆ. ಅದಕ್ಕೆ ನನ್ನ ಮಗ ನನ್ನ 'ಯೂ ಟ್ಯೂಬ್' ಅಂತ ತಮಾಷೆ ಮಾಡ್ತಾನೆ. ಅಂದ್ರೆ, "ಯೂ ಆರ್ ಎ ಟ್ಯೂಬ್‌ಲೈಟ್" ಅಂತೆ!

ಇತ್ತೀಚೆಗೆ ನಮ್ಮ ಆಫೀಸಿನಲ್ಲಿ ಈ ಪಾಸ್‌ವರ್ಡ್‌ಗಳ ಹಾವಳಿ ವಿಪರೀತವಾಗಿಬಿಟ್ಟಿದೆ. ಎಲ್ರೂ ಕಂಪ್ಯೂಟರಿನಲ್ಲಿ ಲಾಗಿನ್ ಮಾಡೋವಾಗ, ಅವರವರ ಡೊಮೇನ್ ಐಡಿಯಲ್ಲೇ ಲಾಗಿನ್ ಮಾಡಬೇಕು. ಹಾಗಾಗಿ, ಈ ಡೊಮೇನ್ ಐಡಿಗೊಂದು ಪಾಸ್‌ವರ್ಡು, ನಮ್ಮ ಬ್ಯಾಂಕಿನ ಸಾಫ್ಟ್‌ವೇರಿಗೊಂದು ಪಾಸ್‌ವರ್ಡು, ನಮ್ಮ ನಮ್ಮ ಅಫೀಷಿಯಲ್ ಇ–ಮೇಲಿಗೊಂದು ಪಾಸ್‌ವರ್ಡು... ಹೀಗೆ ಪಾಸ್‌ವರ್ಡುಗಳನ್ನು ಎಲ್ಲೂ ಬರೆದಿಟ್ಟುಕೊಳ್ಳದೇ, ಮರೆತರೆ, ಲಾಗಿನ್ ಆಗಕ್ಕೆ ಲಾಗ ಹಾಕಬೇಕಾದೀತು!

ನನ್ನ ನೆನಪಿನ ಶಕ್ತಿ ತಕ್ಕ ಮಟ್ಟಿಗೆ ಚೆನ್ನಾಗಿದ್ರೂ, ಯಾವುದಕ್ಕೂ ಇರಲಿ ಅಂತ ಎಲ್ಲಾ ಪಾಸ್‌ವರ್ಡ್‌ಗಳ್ನೂ ಸ್ಪಷ್ಟವಾಗಿ ಬರೆದು, ಲಾಕರ್‌ನಲ್ಲಿ ಇಡೋಣವಂದ್ರೆ, ಆಫೀಸಿನಲ್ಲಿ ಪ್ರತಿ ತಿಂಗಳೂ ಪಾಸ್‌ವರ್ಡ್‌ಗಳನ್ನು ಬದಲಾಯಿಸಬೇಕೆಂಬ ನಿಯಮ ಬೇರೆ! ಒಂದೊಂದು ಪಾಸ್‌ವರ್ಡಿಗೂ ತಿಂಗಳಾಗ್ತಿದ್ದ ಹಾಗೆ, ಕಂಪ್ಯೂಟರಿನ ಪರದೆ ನನ್ನನ್ನು ಅಣಕಿಸತ್ತೆ, "ಯುವರ್ ಪಾಸ್‌ವರ್ಡ್ ಹ್ಯಾಸ್ ಎಕ್ಸ್‌ಪೈರ್ಡ್!" ಅಂತ. "ನಿನ್ನ ಪಿಂಡ!" ಅಂತ ಶಾಪ ಹಾಕ್ತಾ ಬೇರೆ ಪಾಸ್‌ವರ್ಡಿಗಾಗಿ ತಡಕಾಡ್ತೀನಿ. ರಾಮರಾಮಾ, ಈ ಪಾಸ್‌ವರ್ಡಿನಲ್ಲಿ ಇಂಗ್ಲೀಷಿನ ಚಿಕ್ಕ, ದೊಡ್ಡ ಅಕ್ಷರಗಳೂ ಇರಬೇಕಂತೆ, ಅಂಕಿಯೂ ಇರಬೇಕಂತೆ, ಜೊತೆಗೆ ಸ್ಪೆಷಲ್ ಕ್ಯಾರೆಕ್ಟರೂ ಇರಬೇಕಂತೆ! ಒಂದ್ಸಲ ಹೀಗಾಯ್ತು. ಪಾಸ್‌ವರ್ಡ್ ಬದಲಾಯಿಸುವಾಗ, ಕೀಲಿಮಣೆಯಲ್ಲಿ 'ಕ್ಯಾಪ್ಸ್ ಲಾಕ್' ಆನ್ ಆಗಿದ್ದು ನಾನು ಗಮನಿಸಲೇ ಇಲ್ಲ. ಮತ್ತ್ಯಾವಾಗಲೋ ಲಾಗಿನ್ ಆಗುವಾಗ, 'ಕ್ಯಾಪ್ಸ್ ಲಾಕ್' ಆಫ್ ಆಗಿತ್ತೇನೋ. ಎರಡು ಸಲ ಸರಿಯಾಗೇ ಟೈಪಿಸಿದ್ರೂ, 'ತಪ್ಪು, ತಪ್ಪು' ಅಂತ ಪರದೆ ನನ್ನನ್ನು ಅಣಕಿಸಿತು. ನಮ್ಮಲ್ಲಿನ ಕಂಪ್ಯೂಟರ್ ಜಾಣನೊಬ್ಬ "ಓಹ್! ನಿಮ್ಮ ಪಾಸ್‌ವರ್ಡ್ ಬದಲಾಯಿಸುವಾಗ ಕ್ಯಾಪ್ಸ್ ಲಾಕ್ ಆನ್ ಇತ್ತೇನೋ. ಈಗ 'ಆಫ್' ಆಗಿದ್ರೆ, ನಿಮ್ಮ ಪಾಸ್‌ವರ್ಡಿನ ಕ್ಯಾಪಿಟಲ್ ಅಕ್ಷರಗಳನ್ನು ಚಿಕ್ಕಕ್ಷರಗಳಾಗೂ, ಚಿಕ್ಕಕ್ಷರಗಳನ್ನು ಕ್ಯಾಪಿಟಲ್ ಆಗೂ ಟೈಪ್ ಮಾಡಿ" ಅಂತ. ಕನ್‌ಫ್ಯೂಸಿತಳಾಗಿ, ನನ್ನ ತಲೆ, 'ಗಿರ್ರ್' ಅಂತು. ಎಲ್ಲಿಂದಲೋ ನನ್ನ ಮಗ 'ಯೂ ಟ್ಯೂಬ್', ಅಂತ ಅಣಕಿಸಿದಂತಾಯ್ತು!

> ಹೆಂಡತಿ – ಫೇಸ್ ಬುಕ್ಕು, ಟ್ವಿಟರು, ಇನ್ಸ್‌ಟಾಗ್ರಾಮು, ಯೂ ಟ್ಯೂಬು, ಗೂಗಲ್ಲು ಎಲ್ಲಾ ಕಡೆ ಹುಡುಕಿದರೂ ನಿಮಗೆ ನನ್ನಂಥ ಹೆಣ್ಣು ಇನ್ನೊಬ್ಬಳು ಸಿಗಲ್ಲ ಗೊತ್ತಾ ನಿಮಗೆ?
>
> ಗಂಡ – ಅಯ್ಯೋ ಹುಚ್ಚಿ, ನಾನು ಹುಡುಕೋದೇ ಆದರೆ ನಿನ್ನಂಥವಳನ್ನೇ ಮತ್ತೆ ಯಾಕೆ ಹುಡುಕಲಿ ?

# ಫೇಸ್ ಬುಕ್ ವೈರಿಗಳು!

• **ಪ್ರಕಾಶ್ ಶೆಟ್ಟಿ**



ಮಾರ್ಕ್ ಜುಕರ್‌ಬರ್ಗ್ 'ಫೇಸ್ ಬುಕ್' ಆರಂಭಿಸಿದಾಗ ಪ್ರಪಂಚವಿಡೀ ಗೆಳೆತನ ಹರಿಯಬೇಕೆಂಬ ಉದ್ದೇಶವಿತ್ತು. ಆದರೆ ಖ್ಯಾತ ಅನಾಚಾರವಾದಿ ಕಿ.ತಾ.ಪತಿ ಫೇಸ್ ಬುಕ್‌ಗೆ ಎಂಟ್ರಿ ಕೊಟ್ಟದ್ದು ತನ್ನ ಎಲ್ಲಾ ದುರುದ್ದೇಶಗಳನ್ನು ಈಡೇರಿಸುವ ಒಂದೇ ಒಂದು ಉದ್ದೇಶದಿಂದ! ಎಲ್ಲರೂ ಫೇಸ್ ಬುಕ್‌ನಲ್ಲಿ ಎರಡು ಸಾವಿರ, ಐದು ಸಾವಿರ ಗೆಳೆಯರಿದ್ದಾರೆ ಎಂದು ಹೆಮ್ಮೆ ಪಟ್ಟುಕೊಂಡರೆ, ಈ ಅಸಾಮಿ ತಾನು ಲಕ್ಷಗಟ್ಟಲೆ ವೈರಿಗಳನ್ನು ಸಂಪಾದಿಸಿರುವುದನ್ನು ನೆನೆದು ರೋಮಾಂಚನಗೊಳ್ಳುತ್ತಾನೆ.

ಮಿಸ್ಟರ್ ಕಿ.ತಾ.ಪತಿ ಇಷ್ಟೊಂದು ವೈರಿಗಳನ್ನು ಹೇಗೆ ಸಂಪಾದಿಸಿದ ಎಂದು ನಿಮಗೂ ಕುತೂಹಲವಿರಬಹುದಲ್ಲವೇ? ಅವನ ಫೇಸ್ ಬುಕ್ ಸೂತ್ರಗಳು ಏನಪ್ಪಾಂದರೆ, ಪ್ರತಿಯೊಂದಕ್ಕೂ ಉಲ್ಟಾ ಹೊಡೆಯುವುದು. ಫೇಸ್ ಬುಕ್ ಒಂದು ಮುಖಸ್ತುತಿ ಪುಸ್ತಕ ಅಂದುಕೊಂಡವರೆಲ್ಲಾ ಈತನ ಕಿತಾಪತಿಗೆ ಬಿಚ್ಚುಮನಸ್ಸಿನಿಂದ ಆಕ್ರೋಶ ವ್ಯಕ್ತಪಡಿಸುತ್ತಾರೆ.

ಒಮ್ಮೆ ಆತ ಏನು ಪೋಸ್ಟ್ ಮಾಡಿದ್ದ ಗೊತ್ತೆ? ಪ್ರಶ್ನೆ ಪತ್ರಿಕೆ ಬಯಲಾಗುವುದು ದಡ್ಡ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತುಂಬಾ ಒಳ್ಳೆಯದು. ಕಳೆದ ವರ್ಷ ಪ್ರಶ್ನೆಪತ್ರಿಕೆ ಬಹಿರಂಗಗೊಳಿಸಿ ಹೆಸರು ಮಾಡಿರುವ 'ಗುರೂಜೀ'ಯಂತಹವರಿಗೆ ಜಾಮೀನು ಕೊಡಬಹುದಾದರೆ, ಅಂತಹ ನಿಸ್ವಾರ್ಥ ಸಮಾಜಸೇವಕರನ್ನು ಬಂಧಿಸುವುದೇ ತಪ್ಪು. ಈ ಪೋಸ್ಟ್‌ಗೆ ಕಮೆಂಟುಗಳು ಎಷ್ಟು ಗರಂ ಆಗಿದ್ದವುಂದರೆ ಮೊಬೈಲ್, ಸಿಷ್ಟಮ್‌ಗಳೆಲ್ಲ ಹೊತ್ತಿ ಉರಿಯುವುದೊಂದೇ ಬಾಕಿ.

ಇನ್ನೊಮ್ಮೆ ತೂಕದ ವ್ಯಕ್ತಿಗಳ ಬಗ್ಗೆ ತುಂಬಾನೇ ಹಗುರವಾಗಿ ಬರೆದಿದ್ದ. ಈ ಶ್ರೀಮಂತ ಡುಮ್ಮ ಡುಮ್ಮಿಗಳು ದೇಶಕ್ಕೇ ಭಾರ. ಯಾಕೆಂದರೆ ನಮ್ಮ ದೇಶದ ಐವತ್ತು ಪರ್ಸೆಂಟ್ ಆಹಾರ ಅವರಿಗೇ ಬೇಕು. ಬಡವರು ಮಣ್ಣು ತಿನ್ನಬೇಕಾ? ಕೂಡಲೇ ಸರ್ಕಾರ

ನೂರಕ್ಕಿಂತ ಹೆಚ್ಚು ತೂಕವಿರುವವರಿಗೆ ಹೆಚ್ಚು ಆದಾಯ ತೆರಿಗೆ ವಿಧಿಸಬೇಕು. ಇದನ್ನು ಓದುವವರಿಗೆ ದಪ್ಪಗಾಗುವುದು ಮಾನವ ಸಹಜ ಗುಣ ಎಂದಷ್ಟೇ ತಿಳಿದುಕೊಂಡಿದ್ದವರಿಗೆ ಅಚ್ಚರಿಯೋ ಅಚ್ಚರಿ. ಕಮೆಂಟುಗಳ ಚಂಡ ಮಾರುತ!

'ಆ ಪಕ್ಷದ ಒಬ್ಬರಾದರೂ ಸಗಣಿ ಎತ್ತಿದ್ದಾರಾ?' ಎಂದು ಹೋದ ಹೋದಲ್ಲಿ ಹೇಳುತಿದ್ದ ಕಾಂಗ್ರೆಸ್ ಪಕ್ಷದ ಸಗಣಿಚಂದ್ರರು ಮೊನ್ನೆ ಮಾತ್ರ. 'ಆ ಬಾಜಪ್ಪರ ತಲೆಗೆ ಸಗಣಿ ಸುರಿಯಬೇಕ್ರೀ!' ಎಂದು ಹೌಹಾರಿದರಂತೆ. ಈ ಹಸಿ ಬಿಸಿ ಸಗಣಿ ಹೇಳಿಕೆಯನ್ನು ಕಿ.ತಾ.ಪತಿ ಸಮರ್ಥಿಸಿ ಪೋಸ್ಟ್ ಹಾಕಿಬಿಟ್ಟ. 'ಸಗಣಿಚಂದ್ರರು ಹೇಳಿದ್ದರಲ್ಲಿ ಯಾವುದೇ ತಪ್ಪಿಲ್ಲ. ಅವರ ಹೇಳಿಕೆಗೆ ಪೂರಕವಾಗಿ ನಾನು ಹೇಳಬಯಸುವುದೇನೆಂದರೆ, ತಲೆಯಲ್ಲಿ ಬರೀ ಸಗಣಿ ಇರುವವರು ವಾರಕ್ಕೊಮ್ಮೆ ತಲೆಗೆ ಸಗಣಿ ಸುರಿದು (ಸ್ನಾನ)ಕೊಳ್ಳುವುದು ಒಳಿತು. ಗೋಪ್ರೀತಿ ತೋರಿಸಿದಂತೆಯೂ ಆಗುತ್ತದೆ. ಗೋ ಫಾರ್ ಇಟ್!' 1450 ಮಂದಿ ಶೇರ್ ಮಾಡಿದ ಈ ಪೋಸ್ಟ್‌ಗೆ ಬರೋಬ್ಬರ್ 20,000 ಹಿಗ್ಗಾಮುಗ್ಗಾ ಕಮೆಂಟುಗಳು!

ಭ್ರಷ್ಟಾಚಾರದ ಬಗ್ಗೆಯಂತೂ ಈ ಅನಾಚಾರವಾದಿಯ ಪೋಸ್ಟನ್ನು ಓದಿ ವೈರಿಗಳ ಸಂಖ್ಯೆ ಐವತ್ತು ಸಾವಿರ ದಾಟಿತು. ಸರ್ಕಾರ ಭ್ರಷ್ಟಾಚಾರವನ್ನು ಅಧಿಕೃತವನ್ನಾಗಿಸಬೇಕು. ಭ್ರಷ್ಟಾಚಾರ ಖಾತೆ ಆರಂಭಿಸಬೇಕು, ಲೋಕಾಯುಕ್ತ ಮತ್ತು ಎಸಿಬಿಗೆ ತಿಲಾಂಜಲಿ ಹಾಡಿ, ಭ್ರಷ್ಟಾಚಾರ ಅಕಾಡೆಮಿ ಆರಂಭಿಸಬೇಕು, 1000 ಮಂದಿಗೆ ಪ್ರಶಸ್ತಿ ಕೊಡಬೇಕು. ಎಂದೆಲ್ಲಾ ಬರೆದರೆ ಇನ್ನೇನು ಅಲ್ಲವೇ?!

ಪ್ರಧಾನಿಯನ್ನು ಟೀಕಿಸುವಾಗ ಕೂಡ ಕಿ.ತಾ.ಪತಿ ಜಾಗರೂಕರಾಗಿರುತ್ತಾನೆ. ಯಾಕೆಂದರೆ ಆ ಪೋಸ್ಟ್ ನೋಡಿ ವಿರೋಧ ಪಕ್ಷದವರ ಲೈಕುಗಳ ಸುರಿಮಳೆ ಬರಬಾರದಲ್ಲ! ಅದಕ್ಕೇ ಆತ ಒಂದೇ ಪೋಸ್ಟ್‌ನಲ್ಲಿ ವಿರೋಧಪಕ್ಷದ ನಾಯಕರನ್ನೂ ಉಗಿಯುತ್ತಾನೆ. ವೈರಿಗಳಿಂದ ಉಗಿಸಿಕೊಳ್ಳುವುದಕ್ಕೆ! ನೀವು ನಂಬಲೇಬೇಕು, ಈತನಿಗೆ ಇದುವರೆಗೆ ತಪ್ಪಿಯೂ ಒಂದೇ ಒಂದು ಲೈಕುಗಳು ಬಂದಿಲ್ಲ. ಲೈಕುಗಳೇ ಇಂದಿನ ಜೀವನದ ಸರ್ವಸ್ವ ಎಂದು ಕೊಂಡಿರುವವರಿಗೆ ನಾಚಿಕೆಯಾಗಬೇಕು!

ನಾನು ಇದ್ದಿದ್ದನ್ನು ಇದ್ದಹಾಗೆ ಹೇಳಿದರೆ, ಮುಖಪುಟದ ಫೇಸ್ ಬುಕ್
ಗೆಳೆಯರು ಎದ್ದು ಬಂದು ನನ್ನನ್ನು ಒದ್ದಾರು!.

★★

ಅಯ್ಯೋ, ಜಿಮ್‌ಗೆ ಹೋದದ್ದನ್ನು ಫೇಸ್ ಬುಕ್‌ನಲ್ಲಿ ಬರೆಯಲು ಮರೆತು
ಹೋಗುವುದರಲ್ಲಿದ್ದೆ .... ಹೋಗಿದ್ದು ದಂಡವಾಗಿ ಬಿಡುತ್ತಿತ್ತಲ್ಲ!!

★★

ನನ್ನ ಗೆಳೆಯನಿಗೆ ಟ್ವಿಟ್ಟರ್ ಬಗ್ಗೆ ತಿಳಿಸಲು ಯತ್ನಿಸುತ್ತಿದ್ದೆ.
ನಿನ್ನನ್ನು ಫಾಲೊ ಮಾಡಲು ಆಗುತ್ತಿಲ್ಲ!.. ಎಂದ ಅವನು!!

# ಮೊಬೈಲ್ ರಾಮಾಯಣ

**• ತೇಜಸ್ವಿನಿ ಹೆಗಡೆ**

ತಂತ್ರಜ್ಞಾನ ಮುಂದುವರಿದಂತೇ, ಮನುಷ್ಯನ ಎಡವಟ್ಟುಗಳೂ ರೂಪಾಂತರಗೊಳ್ಳುತ್ತಿರುತ್ತವೆ. ವಾಟ್ಸ್‌ಅಪ್ ಜಾರಿಗೆ ಬಂದ ಆರಂಭದಲ್ಲಿ 'ಅಬ್ಬಾ, ಇದೆಷ್ಟು ಸುಲಭವಪ್ಪಾ... ಬೇಕಾದ ಫೋಟೋ ಆಯ್ಕೆ ಮಾಡು, ಥಟ್ಟನೆ ಬೇಕಾದಲ್ಲಿಗೆ ಕಳುಹಿಸಿಬಿಡು... ನಿಮಿಷದೊಳಗೆ ಅವರು ನೋಡಿ ಓಹೋ, ಆಹಾ ಅನ್ನೋ ರಿಪ್ಲೈ ಕೊಟ್ಟ್ರೂ ಆಗಿಬಿಡುತ್ತದೆ. ಈ-ಮೈಲ್ ಎಕ್ಸ್‌ಪ್ರೆಸ್ ರೈಲಾದ್ರೆ ವಾಟ್ಸ್‌ಆಪ್ ಮೆಟ್ರೋ ರೈಲು' ಎಂದೆಲ್ಲಾ ಅನ್ನಿಸಿತ್ತು. ಆದರೆ, ಆಮೇಲೆ ಇಲ್ಲಾದ ಕೆಲವು ಆಕ್ಸಿಡೆಂಟುಗಳು ಅದ್ಯಾವ ಪರಿ ನನ್ನ ಎದೆಯನ್ನು ಡವಗುಡಿಸಿಬಿಟ್ಟವೆಂದರೆ, ಈಗಲೂ ನಾನು ಸಂದೇಶ ಕಳುಹಿಸುವಾಗ ಒಂದು ಹತ್ತಿಪ್ಪತ್ತು ಸಲವಾದರೂ ಕಳುಹಿಸಬೇಕಾದವರಿಗೇ ನಾನು ಹಾಕುತ್ತಿದ್ದೇನೆಯೇ ಎಂದು ಕಣ್ಣಲ್ಲಿ ಎಣ್ಣೆ ಬಿಟ್ಕೊಂಡು ಪರಿಶೀಲಿಸುತ್ತಿರುತ್ತೇನೆ! ಹಾಗಿದೆ ನನ್ನೊಂದಿಗಾದ ಅವಾಂತರಗಳು! ಒಂದೆರಡು ಕಹಿ ಘಟನೆಗಳಂತೂ ಜೀವನ ಪರ್ಯಂತ ಮರೆಯಲಾರದ್ದಂಥವು. ಕೆಲವನ್ನು ನೆನೆದಾಗೆಲ್ಲಾ ಸಣ್ಣ ನಗು ನನ್ನೊಳಗೆ ಮೂಡುತ್ತಿರುತ್ತದೆ. ಅಂಥ ಎರಡು ಘಟನೆಗಳನ್ನು ಇಲ್ಲಿ ಹಂಚಿಕೊಳ್ಳುತ್ತಿರುವೆ.

ಅದೊಂದು ದಿವಸ ಶೋಕವಾರ್ತೆ ನೀಡಿದ ದೂರದ ನೆಂಟರಿಗೋರ್ವರಿಗೆ ಸಂತಾಪ ಸೂಚಿಸುವಾಗ, ಬೇಸರದ ಇಮೋಜಿಯ ಬದಲು, ಬೆರಳ್ತಪ್ಪಿ ಬಾಯಗಲ ನಗುತ್ತಿರುವ ಇಮೋಜಿ ಪೇಸ್ಟಾಗಿ ತಲೆಚಚ್ಚಿಕೊಂಡಿದ್ದೆ. ಎಷ್ಟೇ ಸಮಝಾಯಿಶಿ ನೀಡಿದರೂ ಅವರು ನನ್ನನ್ನು ಅನುಮಾನದಿಂದಲೇ ಕಂಡು, ತೀರಾ ಇತ್ತೀಚಿಗೆ ಅವರಿಂದಲೂ ಒಂದೆರಡು ಇಂಥಾ ಎಡವಟ್ಟುಗಳು ನಡೆದ ಮೇಲೆಯೇ ನನ್ನ ತಪ್ಪು ಮನ್ನಸಿ ಉದ್ಧರಿಸಿದರು!

ಇದಂತೂ ಮೊನ್ನೆಯಷ್ಟೇ ನಡೆದ ಅವಾಂತರ. ಅಂದು ನನ್ನ ಮಗಳಿಗೊಂದು ನೋಟ್ಸ್ ಬೇಕಿತ್ತು. ಅವಳ ಗೆಳತಿಗೆ ಪುಸ್ತಕದ ಹೆಸರನ್ನು ಮೆಸ್ಸೇಜ್ ಮಾಡಿ ಅದರ ಫೋಟೋ ತೆಗೆದು ಕಳಿಸಮ್ಮಾ ಎಂದೆ. ಅದಕ್ಕೆ ಆಕೆ "ಸ್ಸಾರಿ, ಇದು ನನ್ನಲ್ಲಿಲ್ಲ.. ಇದೆಂಥಾ ನೋಟ್ಸ್? ನನಗೇ ನೀವು ಮಾಡಿದ್ದಾ ಈ ಮೆಸ್ಸೇಜ್?" ಎಂದೆಲ್ಲಾ ಬರೆದಳು. ನನಗೆ ಆಶ್ಚರ್ಯ ಮತ್ತು ಸಣ್ಣ ಸಿಟ್ಟು ಬಂತು. ಮೊನ್ನೆವರೆಗೂ ಈಕೆಗೆ ಎಲ್ಲಾ ನೋಟ್ಸ್ ನಾನೇ ಕಳಿಸ್ತಿದ್ದೆ.. ಈಗ ಈಕೆ ಹೀಗೆಲ್ಲಾ ಹೇಳುತ್ತಿದ್ದಾಳಲ್ಲಾ ಎಂದುಕೊಂಡೆ. ಏನೂ ಮಾತಾಡದೇ ಸುಮ್ಮನಾಗಿಬಿಟ್ಟೆ. ಮರುದಿವಸ ಮತ್ತೆ ಯಾವುದಕ್ಕೋ ನಾನು ಮೆಸ್ಸೇಜ್ ತೆಗೆದು ನೋಡಿದಾಗ ನನ್ನಿಂದಾದ ಎಡವಟ್ಟು ಗೊತ್ತಾಯಿತು. ನನ್ನ ಮಗಳ ಗೆಳತಿಯ ಹೆಸರೂ, ನನ್ನ ಸ್ನೇಹಿತೆಯ ಹೆಸರೂ ಒಂದೇ ಆಗಿದ್ದರಿಂದ ನಾನು ತಪ್ಪಿ ನನ್ನ ಗೆಳತಿಗೆ ಮೆಸ್ಸೇಜ್ ಕಳಿಸಿಬಿಟ್ಟಿದ್ದೆ. ಹೀಗಾಗಿ ನನಗೆ ಹಾಗೆ ರಿಪ್ಲೈ ಬಂದಿತ್ತು. ಈ ಅವಾಂತರಗಳ ಕಥೆ ಹೇಳಿ ಮುಗಿಯುವಂಥದ್ದಲ್ಲ.

ಹಾಂ, ಈಗ ವಾಟ್ಸ್‌ಅಪ್ಪಿನಲ್ಲಿ ಅಪ್ಪಿತಪ್ಪಿ ನೀವು ಸಂದೇಶವನ್ನು ಬೇರೆ ವ್ಯಕ್ತಿಗೋ/ ಗುಂಪಿಗೋ ಕಳುಹಿಸಿಬಿಟ್ಟರೂ, ಅದನ್ನು ಕೆಲವು ನಿಮಿಷಗಳೊಳಗೆ ಡಿಲೀಟ್ ಮಾಡಿಬಿಟ್ಟು ನಿಟ್ಟುರಿಸು ಬಿಡುವ ವ್ಯವಸ್ಥೆಯಾಗಿದೆ. ಈ ಡಿಲೀಟ್ ಆಪ್ಷನ್ ಕಂಡು ಹುಡುಕಿ ನಮ್ಮಂಥವರನ್ನು ಬದುಕಿಸಿದ ಪುಣ್ಯಾತ್ಮನ ಕೈಬೆರಳುಗಳು (ಪ್ರೋಗ್ರಾಮ್ ಮಾಡಿದ) ತಣ್ಣಗಿರಲಿ.

■

# ಸೋ. ಮೀ. ಮೇನಿಯ

• ನಂನಾಗ್ರಾಜ್

1. ಪ್ರವರ / ಸಂಕಲ್ಪ

ಮೊಬೈಲ್ ಗೋತ್ರೇ
ಫೇಸ್‌ಬುಕ್ ನಕ್ಷತ್ರೇ
ಟ್ವಿಟರ್ ರಾಶೇ
ಸಿಗ್ನಲ್ ಪ್ರದೇಶೇ.....

2. ಆದ್ಯತೆ

ಸಮಾಜ ಗಮನಿಸೊಲ್ಲ
ಆಗಿದ್ದರೆ ನೀವು ಕ್ವಿಟರ್
ಅದೇ ಸಮಾಜ ಮೆಚ್ಚುವುದಿಲ್ಲ
ಆಗಿರದಿದ್ದರೆ ನೀವು ಟ್ವಿಟರ್

3. ದಾಖಲೆ

ಅತಿ ಹೆಚ್ಚು ಓದಲ್ಪಡುತ್ತಿದ್ದ ಪುಸ್ತಕ
ಇವುಗಳಲ್ಲೊಂದು ಇಲ್ಲಿಯ ತನಕ
ಭಗವದ್ಗೀತೆ, ಬೈಬಲ್, ಕುರಾನ್, ರೇಸ್‌ಬುಕ್
ಇವನ್ನೆಲ್ಲ ಹಿಮ್ಮೆಟ್ಟಿ ಸಾಗಿದೆ ಫೇಸ್‌ಬುಕ್ !

## 4. ಬಹುಮುಖ ಪ್ರತಿಭೆ

ಆಗಿತ್ತು ಫೋನ್ ಸ್ಟ್ಯಾಟಿಕ್
ಹಾಗೂ ನಾವು ಮೊಬೈಲ್
ಈಗೆಲ್ಲ ಫೋನ್ ಸ್ಮಾರ್ಟ್ ಮೊಬೈಲ್
ಹಾಗೂ ನಾವು ಸ್ಟ್ಯಾಟಿಕ್

## 5. ಸ್ಮಾರ್ಟ್ ಫೋನ್

ಬೆಳಗ್ಗೆದ್ದು ಇ-ಕಸ ಗುಡಿಸಿ
ಸಮಯಕ್ಕೆ ಕರೆಂಟ್ ತಿನ್ನಿಸಿ
ಆಗಾಗ ಹಣ ತುಂಬಿಸಿ
ಮೃದುವಾಗಿ ಒತ್ತಿ ಒತ್ತಿ
ಅಯ್ಯೋ ! ಏನೆಲ್ಲಾ ಹೇಳ್ತೀ !


## 6. ಕುತೂಹಲ

ನೋಡುತ್ತಿದ್ದೆ ಪ್ರತಿದಿನ ನಿತ್ಯ ಭವಿಷ್ಯ
ಈಚೆಗೆಲ್ಲ ಬೇರೆಯದೇ ವಿಷಯ
'ಫೇಸ್‌ಬುಕ್'ಲಿ ಲೈಕ್ಸ್ ಎಷ್ಟು?
ಟ್ವಿಟರ್‌ಲಿ ಫಾಲೋಯರ್ಸ್ ಎಷ್ಟು?

## 7. ಒಕ್ಕೂಟ

ಇಂದಿನ ಸೋಷಿಯಲ್ ಮೀಡಿಯ
ತುಂಬಾನೇ ಒಳ್ಳೆಯ ಐಡಿಯ
ನಾವೆಲ್ಲರಿದ್ದೇವೆ ಒಂದೇ ಪೇಜಲ್ಲಿ
ಇಂದಿನ ಫೇಸ್‌ಬುಕ್ ಏಜಲ್ಲಿ !


■







ನಾನು ಕದ್ದಿದ್ದ ಐಡೆಂಟಿಟಿ ಫೇಕ್.
ಈಗಿನ ಕಾಲದಲ್ಲಿ ಯಾರನ್ನೂ ನಂಬೋ ಹಾಗಿಲ್ಲ.


ಅದಕ್ಕೆ ಮಾತು ಬರುತ್ತೇನು?
ಇಲ್ಲ, ಆದರೆ ಟ್ವೀಟ್, ಮೆಸೇಜ್, ಇಮೇಲ್, ಟೆಕ್ಸ್ಟ್ ಎಲ್ಲಾ ಮಾಡುತ್ತೆ.
CARTOONSTOCK .com
STAHLER. 4/6
Search ID: jsh120406
©Jeff Stahler/Distributed by Universal Uclick for UFS via CartoonStock.com


ಏನು ಖುಷಿಯಾಗಿದ್ದಾಳೆ!
ಮೊಬೈಲ್ ಫೋನ್ ಮರೆತು ಬಂದಿರಬೇಕು.
CARTOONSTOCK .com
Search ID: jsh120518
STAHLER 5/18

# 'ಟ್ವಿಟರಿಗನಾಗಿ ಸೇರಿದ್ಮೇಲೆ ಏನೇನ್ಕೊಂಡಿ?'

• ಎನ್ನಾರ್

'ಉಂಡಾಡಬಹುದು ಓಡಿಬಾ ಎನ್ನಪ್ಪ ಊಟಕೆ ಬಾರೋ ಕೃಷ್ಣಪ್ಪ'

ಇದು ಅಂದಿನ ಕಾಲ. ನೆಟ್ ಇಲ್ಲದಿದ್ದ, ಹಾಡು ಮತ್ತು ಭಾಷೆ ನೆಟ್ಟಗಿದ್ದ ಕಾಲ. ಈಗ?

'ಕೊಂಡಾಡಬಹುದು ನೋಡು ಬಾ ಸೀರ್‍ಯಲ್ಲ....vootಕೆ ಬಾರೋ ಕೃಷ್ಣಪ್ಪ'. ಸಿಂಪಲ್ ಆರ್ಡಿನರಿ ಊಟಕ್ಕೆ ಹತ್ತಿರದ ಪದ ಬಂದು, ಅದಕ್ಕೊಂದು ಅರ್ಥವಂತಿ ಸಕಲಂ ಕಲಸುಮೇಲೋಗರಂ.. ಆರ್ ಆ್ಯಸ್ ದ ನ್ಯೂ ವರ್ಡ್ ಗೋಸ್... ಆಲ್ ಸ್ಟಫ್ ಅಂಡ್ ಬಾಲ್ಡರ್‌ಡ್ಯಾಷೂ.

ದೃಶ್ಯಕ್ಕೆ ಆ ಬದಲಾವಣೆ ಬಂದರೆ ಶ್ರಾವ್ಯಕ್ಕೆ?

'ಚಂಗುಚಂಗೆಂದು ಹಾರುವ ರಂಗುರಂಗಿನ ಈ ಜಿಂಕೆ'ಗೆ ಸರಿಸಮನಾದ ಓಟವನ್ನು 'ಟ್ವೀಟು ಟ್ವೀಟೆಂದು ಟ್ವೀಟುವ ಟ್ವಿಟರು ಸೈಟಿನ ಟ್ವಿಟರಾಟಿ' ಎಲ್ಲೆಲ್ಲೂ ಹರಡಿದೆ. ಇಲ್ಲಾವುದೋ ದೃಶ್ಯವನ್ನು ಬಿತ್ತರಿಸಬೇಕು. 'ಟ್ವಿಟರಿಗನಾಗಿ ಸೇರಿದ್ಮೇಲೆ ಏನೇನ್ಕೊಂಡಿ?' ಎಂದರೆ ಆ ಕೊಂಡಿಗಳ ಸಾಲುಸಾಲುಗಳೇ ನಮ್ಮ ಮುಂದೆ – ಲಿಂಕ್ ಎಂದು ಶುದ್ಧ ಕನ್ನಡವಾಗಿ ಪರಿವರ್ತಿತವಾಗಿರುವ ಪದದ ಪೂರ್ವಾಶ್ರಮದ ಪದವೇ ಕೊಂಡಿಯಲ್ಲವೆ!

ಡೂಡು ಡುಡೆಟುಗಳ, ಮಚ್ಚಾ ಮಗಾಗಳ ದುನಿಯಾದಲ್ಲಿ ಮೀನಿಂಗು ಅದೇ ಇದ್ದರೂ ಭಾಷೆ ಬೇರೆ ಅಥವ ಪದಗಳು ಅವೇ ಆದರೂ ಅರ್ಥ ಬೇರೆ ಆಗಿರುವ ಇಂದಿನ ದಿನಗಳ ಈ ಸೊಗಮಂ ಏನೆಂದು ಬಣ್ಣಿಸಲಿ!

ಮೇಷ್ಟ್ರು... ದಟ್ ಓಲ್ಡ್ ಒನ್ ವಿತ್ ಎ ಲಾಟ್ ಆಫ್ ಬೋರಿಂಗ್ ಸ್ಟಫ್.... ಪಾಠ ಮಾಡಿದ್ದೂ ಮಾಡಿದ್ದೇ. ಶಿಷ್ಯನ ತಲೆ ನಾನ್–ಕೋಆಪರೇಷನ್ ಮೂಮೆಂಟ್‌ನಲ್ಲಿತ್ತು. ಬಲವಂತವಾಗಿ ತುರುಕಹೋದರೆ ಸಿವಿಲ್ ಡಿಸೊಬೀಡಿಯೆನ್ಸು.... ಹಿಂದಿನ ಕಾಲದಂತೆ ಮೇಷ್ಟ್ರು ದಂಡ ಹಿಡಿದು 'ದಂಡ ಮಾರ್ಚ್' ಮಾಡಿದರೆ 'ಪ್ರಿವೆಂಷನ್ ಆಫ್ ಕ್ರೂರಿಯಲ್ಟಿ ಟು ಅನಿಮಲ್ಸ್' ತಂಡ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳುವ ಭೀತಿ.

'ಸ್ಸಾರಿ ಮೈ ಬಾಯ್.... ಐ ಕೆನಾಟ್ ಅಪ್‌ಲೋಡ್ ದೀಸ್ ಲೆಸನ್ಸ್ ಟು ಯುವರ ಬ್ರೈನ್... ಸ್ಟೋರೇಜ್ ಸ್ಪೇಸ್ ರನಿಂಗ್ ಔಟ್' ಎಂದರು. ಇದನ್ನೇ ಬರೆದೂ ಕಳುಹಿಸಿದರು.

ಮರುದಿನ ಹುಡುಗನ ಪೇರೆಂಟ್ಸ್ 'ವಿ ಹ್ಯಾವ್ ಆಸ್ಕ್ಡ್ ಹಿಮ್ ಟು ಡಿಲೀಟ್ ಸರ್ಟನ್ ಲವ್ ವೈರಸಸ್ ಅಂಡ್ ಹ್ಯಾವ್ ಎಂಪ್ಟೀಡ್ ದ ರಿಸೈಕಲ್ ಬಿನ್ ಇನ್ ಹಿಸ್ ಬ್ರೈನ್.... ದೇರ್ ಈಸ್ ಸಮ್ ಸ್ಪೇಸ್ ಲೆಫ್ಟ್ ಇನ್ ದ 'ಸಿ' ಡ್ರೈವ್ ಅಂಡ್ ಸಮ್ ಇನ್ ದ 'ಇ' ಡ್ರೈವ್ ಆಲ್ಸೋ...' ಎಂದು ಬರೆದು ಕಳುಹಿಸಿದ್ದರು. 'ಸಿ' ಡ್ರೈವ್ ಎಂದರೆ 'ಕಾಂಪ್ರೆಹೆನ್ಷನ್' ಅಂತೆ; 'ಇ' ಡ್ರೈವ್ ಎಂದರೆ ಎಂಥೂಸಿಯಾಸಮ್ ಅಂತೆ.

ಹೆಣ್ಣುಗಳದೂ ಈಗ ಇದೇ ವಿಚಿತ್ರ ಭಾಷೆ. ಮದುವೆಯಾಗಿ ನಾಲ್ಕು ತಿಂಗಳಾದವಳೊಬ್ಬಳು 'ಅಪ್‌ಲೋಡ್ ಆಗಿದೆ ಕಣೆ; ಫೈಲ್ ಡೌನ್‌ಲೋಡ್ ಆಗೋದು ಬೈ ದ ಎಂಡ್ ಆಫ್ ಆಗಸ್ಟ್ ಅಂದಿದ್ದಾರೆ ಗೈನಿಕ್' ಎಂದರೆ ಷೀ ಈಸ್ ಕ್ಯಾರೀಯಿಂಗ್; ಫೈಲ್ ಎಂದರೆ ಮಗು ಎಂದು ಅರ್ಥವಂತೆ!

ಸಿಲ್ಕ್ ಸೀರೆಗಳನ್ನು ಕೊಳ್ಳಬೇಕಾದರೆ 'ಎಷ್ಟು ಗ್ರಾಂ ಸೀರೆ' ಎಂದು ಕೇಳುತ್ತಿದ್ದ ಕಾಲವಿತ್ತು. ಜಗಕ್ಕೆ ಇಂತಿಷ್ಟು ಗ್ರಾಂ ಲೆಕ್ಕದಲ್ಲಿ 'ನಲವತ್ತು ಗ್ರಾಂ, ಅರವತ್ತು ಗ್ರಾಂ' ಈ ರೀತಿಯಲ್ಲಿ ವಸ್ತ್ರಸಾಂದ್ರತೆಯನ್ನು ವರ್ಣಿಸುತ್ತಿದ್ದರು. ಈಗಲೂ ಗ್ರಾಂ ಲೆಕ್ಕದಲ್ಲಿನ ಬಟ್ಟೆಗಳಿಗೆ. ಆದರೆ ಅದು ವಸ್ತ್ರಸಾಂದ್ರತೆ ಅಲ್ಲದೆ ವಸ್ತ್ರಹೀನತೆಯ ದ್ಯೋತಕ. ನಲವತ್ತು ಗ್ರಾಂ ಇಡೀ ಡ್ರೆಸ್ಸಿನ ತೂಕ. ಅದು ಒನ್, ಒನ್ ಅಂಡ್ ಹಾಫ್, ಟೂಯಿಂದ ತ್ರೀಪೀಸ್‌ವರೆಗೂ ಒಟ್ಟಾರೆ ಬಣ್ಣದ ತೂಕ. ಇಂತಹ 'ತೂಕ'ದ ವ್ಯಕ್ತಿಗಳನ್ನು ಗ್ರಾಂ ಬೈ ಗ್ರಾಂ ನೋಡಬೇಕೇ? ಕ್ಲಿಕ್ಕಿಸಿ ಇನ್‌ಸ್ಟಾಗ್ರಾಂ.

ಸೋಷಿಯಲ್ ಮೀಡಿಯಾಗಳ ಕಥೆಯಂತೂ ಸರೇಸರೆ. ಗಂಡ ಹೆಂಡತಿಯ ಫೇಸ್‌ಬುಕ್ ಫ್ರೆಂಡ್ ರಿಕ್ವೆಸ್ಟ್ ಅಕ್ಸೆಪ್ಟ್ ಮಾಡುತ್ತಾನೆ. ಕೂಡಲೆ ಝುಕರಣ್ಣ 'ಗಂಡ ಈಸ್ ನೌ ಫ್ರೆಂಡ್ಸ್ ವಿತ್ ಹೆಂಡತಿ' ಎನ್ನುತ್ತಾನೆ! ಇದು ಎಲೆಕ್ಟ್ರಾನಿಕ್ ತಾಳಿಯೋ ಅಥವ ನೆಟ್ಟು ಕಟ್ಟಿದ ರಾಖಿಯೋ ಕಾಣೆ. ಆದರೆ ಒಂದಂತೂ ನಿಜ. ಜೀವನದಲ್ಲಿ ಸಕಲವೂ ಕಂಡೀಷನಲ್ ಎನ್ನುವುದಕ್ಕೆ ಎಫ್‌ಬಿಗಿಂತ ಉದಾಹರಣೆ ಬೇಕಿಲ್ಲ. ಇತರರು ಹಾಕಿದ ಪೋಸ್ಟ್‌ಗಳ ಬಗ್ಗೆ ನಿಮ್ಮ ಧೋರಣೆಯ ಮೇಲೆ ನಿಮ್ಮ 'ಸ್ನೇಹಸಮಯ'ದ ನಿರ್ಧಾರ; ಒಪ್ಪಿದರೆ ಲೈಕು; ಒಪ್ಪದಿದ್ದರೆ ಬ್ಲಾಕು!

ಭಾಷಾಸ್ವಾರಸ್ಯಕ್ಕೆ 'ಆನ್‌ಲೈನ್ ಷಾಪಿಂಗ್' ಸೈಟುಗಳನ್ನು ನೋಡಬೇಕು. 'ಫ್ಲಿಪ್‌ಕಾರ್ಟ್' ಅರ್ಥಾತ್ 'ಗಾಡಿಯನ್ನು ಬುಡಮೇಲು ಮಾಡು' ಎಂದರ್ಥದ ಒಂದು ಸೈಟ್. ಟೊಮೇಟೋ ಮಾರುತ್ತಿದ್ದವರು ಎಲೆಕ್ಷನ್ ಟೈಮಲ್ಲಿ ಭಾಷಣ ನಡೆಯುತ್ತಿದ್ದ ಸ್ಥಳಕ್ಕೆ ಹೋದಾಗ ಜನರು ಕಾರ್ಟನ್ನು ಫ್ಲಿಪ್ ಮಾಡಿ ಟೊಮೇಟೋ ತ್ರೋ ಮಾಡುತ್ತಾ ಟಾರ್ಗೆಟ್ ಪ್ರಾಕ್ಟೀಸ್ ಮಾಡುತ್ತಿದ್ದ ಕಾಲದ ಅರ್ಥಕ್ಕೂ, ಈಗಿನ ಅರ್ಥಕ್ಕೂ ತತ್ಸಾತ್ ಸಂಬಂಧವಿಲ್ಲ. ಇಲ್ಲಿ ಗಾಡಿ ಉರುಳಿಸಿದರೆ ಸಾಮಾನುಗಳ ಸರ್ಚು, ಹಾರಿಬಲ್ ಖರ್ಚು! ಇದರ ಅಣ್ಣ ಅಮೆಜಾನ್‌ನಲ್ಲಿ ಬೇಜಾನ್ ಕೊಂಡು ಬೇ-ಜಾನ್ ಆಗಿರುವವರೆಷ್ಟೋ... ಇ-ಬೇಯಲ್ಲಿ ಗೂಬೆಯಂತೆ ಖರೀದಿಸಿ ದ್ರಾಬೆಗಳಾದವರು ಎನಿತೋ...

ಸೋಮಾರಿಗಳಿಗೆ ಹಾಸಿಗೆ ಹಾಸಿಕೊಡುವ ಅಥವ ಮನೆಯಲ್ಲೂ ನಕ್ಷತ್ರಿಕನಾಗಿ ಕಾಡುವ 'ವರ್ಕ್ ಫ್ರಂ ಹೋಮ್'.... 'ಎಲ್ಲ ಬಲ್ಲೆನ್ನೈ ನಾ ಸರ್ವಜ್ಞ' ಎನ್ನುತ್ತಾ ಭೀತಿಯ ಬಲೆ ಹರಡುವ ವೆಬ್‌ಗಳು... ಕತೆ, ರಸಿಕತೆ, ಮಾದಕತೆ, ವ್ಯಥೆ, ಎಲ್ಲವನ್ನು ನೆಟ್ಟಗಾಗಿಸುವ, ಸೊಟ್ಟಗಾಗಿಸುವ, ಎಲ್ಲ ವಿಧದ ಸೈಟುಗಳು, ವೆಬ್ಬುಗಳು, ಗಬ್ಬುಗಳು, ಬ್ಲಾಗುಗಳು, ಬಾಗುಗಳು....

'ಸೋ...' ಎನ್ನುತ್ತಾ ವಿವರಿಸಿ, 'ಷಿ'ಯನ್ನು ಹಿಗ್ಗಿಸಿ, ಕುಗ್ಗಿಸಿ, ಬಳಸಿ, ಬೆಳೆಸಿ, 'ಎಲ್' ಎಂಬ ಯೂನಿವರ್ಸಲ್ ಲರ್ನಿಂಗ್ ಸೈನ್‌ಗೂ, ಎಲ್ ಎಂಬ ಎವರ್ ಗ್ರೀನ್ ಲವ್ ಸೈನ್‌ಗೂ ಪೂರಕ, ಪ್ರೇರಕ, ಮಾರಕವಾದ ಸೋಷಿಎಲ್ ಸೈಟೇ ಇದೋ ನಿನಗೊಂದು ಅಫೆಕ್ಷೊನೇಟ್ ಬೇರ್ ಹಗ್.

■